# ತಪೋವಾಣಿ

ಸಂಪುಟ 17 ಸಂಚಿಕೆ 06 ಜೂನ್ 2020 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಡಿಸೆಂಬರ್ 2004ರ ಸಂಚಿಕೆ)

ಅಪಾರ ಮಳೆಯಾಗಿದೆ. ಜನರು ಗೊಣಗುತ್ತಾರೆ: "ಅತಿವೃಷ್ಟಿಯಾಗಿದೆ." "ಅತೀ ಹೆಚ್ಚು," "ಅತೀ ಕಡಿಮೆ," "ತಕ್ಕಮಟ್ಟಿಗೆ".... ನಾವು ಯಾವಾಗಲೂ ಗೊಣಗುತ್ತಿರುತ್ತೇವೆ!

ಒಂದು ಪರಿಸ್ಥಿತಿಯನ್ನು ಅವಲೋಕಿಸಲು ಸದಾ ಬೇರೊಂದು ದೃಷ್ಟಿಕೋನವಿರುತ್ತದೆ. ಇದನ್ನು ಹೇಳಿದ್ದು ನನಗೆ ನೆನಪಿದೆ. ಆದರೆ ಮತ್ತೊಂದು ದೃಷ್ಟಿಕೋನದ ಬಗ್ಗೆ ಹೇಳಿದ್ದೆನೋ ಇಲ್ಲವೋ ನೆನಪಿಲ್ಲ, ಮೂರನೆಯ ದೃಷ್ಟಿಕೋನ, ಉನ್ನತ ವಲಯದಿಂದ ಕಾಣುವ ನೋಟ. ನಾವು ಒಂದು ಬೆಟ್ಟವನ್ನು ಹತ್ತಿ ನೋಡಿದಾಗ, ಕೆಳಗಿರುವ ಮನೆಗಳು ಆಟಿಕೆಗಳಂತೆ ಕಾಣುತ್ತವೆ. ನಾವು ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಿದಾಗ, ನಮ್ಮ ಅನೇಕ ವರ್ತನೆಗಳು ಮತ್ತು ವೃತ್ತಿಗಳು ಬಾಲಿಶವಾಗಿ ಕಾಣುತ್ತವೆ. ಅದಕ್ಕಾಗಿಯೇ ನಾವು ಆಗಿಂದಾಗ್ಗೆ ನಮ್ಮ ಜೀವನವನ್ನು ಉನ್ನತ ವಲಯದಿಂದ ಅವಲೋಕಿಸಬೇಕು.

ಮೂರನೆಯ ದೃಷ್ಟಿಕೋನವೇ, ದಿವ್ಯ ದೃಷ್ಟಿಕೋನ, ಮಾನವನಿಗಿಂತ ಮೇಲಿನದು. ಹಾಗೂ ದೈವವು ಯಾವಾಗಲೂ ಸರಿಯಾಗಿರುತ್ತದೆ. ನಾವು ಸತ್ಯವನ್ನು ದಿವ್ಯತೆಯ ದೃಷ್ಟಿಕೋನದಿಂದ ನೋಡುತ್ತೇವೆ. ಆದರೆ ನಮ್ಮನ್ನು ಕೆಳಕ್ಕೆಳೆಯುವ ಭಾರೀ ಅಹಂಗಳಿಂದಾಗಿ ಹೆಚ್ಚಿನ ಜನರು ಔನ್ನತ್ಯಕ್ಕೇರಲು ಪ್ರಯತ್ನಿಸುವುದೇ ಇಲ್ಲ. ಅಹಂ, ನಮಗೂ ದೈವಕ್ಕೂ ನಡುವೆ ಇರುವ ಪರ್ವತ.

ಅಹಂ ಅನ್ನು ನಿವಾರಿಸಿದಾಗ, ನಾವು ದೇವರೊಂದಿಗಿರುತ್ತೇವೆ. ಅಲ್ಲಿಗೆ ಸಾಧನೆ ಮುಗಿದಂತೆ.

ತಪೋನಗರ ಅಸ್ತಿತ್ವಕ್ಕೆ ಬರುವ ಮೊದಲು ನಾನು ಸಮೀಪದ ಒಂದು ಹಳ್ಳಿಯ ಗುಡಿಸಲಿನಲ್ಲಿ ಬದುಕಿನೊಂದಿಗೆ ಹೋರಾಡುತ್ತ, "ಮಾನಸ"ದ ಕನಸು ಕಾಣುತ್ತಿದ್ದೆನೆಂದು "ಬೆಳಕಿಗೆ ಬಾಗಿಲುಗಳು" ಪುಸ್ತಕ ಓದಿದ ಎಲ್ಲರಿಗೂ ತಿಳಿದಿರುತ್ತದೆ. ಇತ್ತೀಚೆಗೆ ಆ ಸ್ಥಳಕ್ಕೆ ಭೇಟಿ ನೀಡಿದ ಸ್ನೇಹಿತರೊಬ್ಬರು ನನಗೆ ಆ ಜಾಗವನ್ನು ಕೊಂಡುಕೊಳ್ಳಲು ಹೇಳಿದರು. ನಾವು ಅದನ್ನು ಕೊಂಡುಕೊಂಡೆವು.

ಅದಕ್ಕೆ ಒಂದು ಹೆಸರನ್ನಿಡಲು ಯೋಚಿಸುತ್ತಿದ್ದೆ, ಅನೇಕ ದಿನಗಳ ಕಾಲ ಯೋಚಿಸಿದ ಮೇಲೆ ಒಂದು ಹೆಸರು ಹೊಳೆಯಿತು. ನಾನು ಆ ಹೆಸರನ್ನು ಘೋಷಿಸಿದೆನಾದರೂ ನನಗೆ ಅದರಿಂದ ಸಂಪೂರ್ಣ ತೃಪ್ತಿ ಉಂಟಾಗಿರಲಿಲ್ಲ. ನಂತರ ಒಂದು ದಿನ ನಾನು ಒಂದು ಗಿಡದ ಕೆಳಗೆ ವಿರಮಿಸುತ್ತಿರುವಾಗ ಒಂದು ಹೆಸರು ಹೊಳೆಯಿತು: 'ಅಂತರ್ ಮಾನಸ.' ಇದು ಋಷಿಗಳಿಂದಲೇ ಬಂದಿದೆ ಎಂದು ನನಗೆ ತಿಳಿದಿತ್ತು!

ಅಲ್ಲಿ ವಾಸಿಸುವ ಕೋಣೆ ಹಾಗೂ ಧ್ಯಾನ ಮಂದಿರ ತಯಾರಾದ ಕೂಡಲೆ ನಾನು ಹೆಚ್ಚು ಕಾಲ ಅಲ್ಲೇ ಇರಲು ನಿಶ್ಚಯಿಸಿದ್ದೇನೆ. ಅಲ್ಲಿ ಅನೇಕ ನೆನಪುಗಳು, ಕನಸುಗಳು ಇವೆ. ಅದು ನನ್ನ ವಿಶ್ರಾಂತಿ ಧಾಮ; ಒಂದು ರೀತಿಯಲ್ಲಿ ನನ್ನ ಗಮ್ಯಸ್ಥಾನ.

ನಮ್ಮ ಪಾಠಗಳನ್ನು ಕಲಿಯುವುದು ಯಾವಾಗ? ಯಾವ ವಯಸ್ಸಿನಲ್ಲಿ? ನಾನು ಹೇಳುವುದು—ಎಲ್ಲಾ ಸಮಯದಲ್ಲಿ; ಯಾವುದೇ ವಯಸ್ಸಿನಲ್ಲಿ. ನಮಗೆ ಕಲಿಯುವ ಇಚ್ಛೆ ಇದ್ದ ಮೇಲೆ ಅದು ಯಾವಾಗಲಾದರೂ ಪರವಾಗಿಲ್ಲ. ಪ್ರತಿಯೊಂದು ಪಾಠವೂ ಪರಿಪೂರ್ಣದೆಡೆಗೆ ಅಂದರೆ ಭಗವಂತನೆಡೆಗೆ ಒಂದು ಮೆಟ್ಟಿಲು. ಹತ್ತಲು ಅಂತಹ ಅನೇಕ ಮೆಟ್ಟಿಲುಗಳಿವೆ. ಕೆಲವನ್ನು ನಾವು ಈಗ ಹತ್ತುತ್ತೇವೆ, ಇನ್ನು ಕೆಲವನ್ನು ಮುಂದಿನ ಜನ್ಮ ಅಥವಾ ಮುಂದಿನ ಹಲವಾರು ಜನ್ಮಗಳಲ್ಲಿ.

---

### ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು ;
  ಋಷಿಗಳು ನಮ್ಮ ಮಾರ್ಗದರ್ಶಿಗಳು

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ**

ಪ್ರಾಥಮಿಕ ತರಗತಿ – ಬೆಳಿಗ್ಗೆ 10 ರಿಂದ 11

ರೆಗ್ಯುಲರ್ ತರಗತಿ – ಬೆಳಿಗ್ಗೆ 11 ರಿಂದ ಮದ್ಯಾಹ್ನ 1

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶನಿವಾರ** (ಬೆಳಿಗ್ಗೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ
(ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.




ಪ್ರತಿದಿನ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡುವುದರಲ್ಲಿ ಮಾನಸ ಕುಟುಂಬವು ಭಾಗವಹಿಸುತ್ತಿದೆ

### ಸುದ್ದಿ–ಸೂಚನೆಗಳು

- ಲಾಕ್‌ಡೌನ್ ಕಾರಣದಿಂದಾಗಿ, ದಿನಾಂಕ 24–05–2020 ರಂದು ಗುರೂಜಿಯವರ 81ನೇ ಹುಟ್ಟುಹಬ್ಬದ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕಾಗಿ ನೂರಾರು ಧ್ಯಾನಿಗಳು ತಮ್ಮ ತಮ್ಮ ಮನೆಗಳಿಂದಲೇ ತಪೋನಗರಕ್ಕೆ ಮಾನಸಿಕವಾಗಿ ಸಂಪರ್ಕಗೊಂಡು ವಿಶೇಷವಾಗಿ ಧ್ಯಾನಮಾಡಿದರು. ಈ ವಿಶೇಷ ಕಾರ್ಯಕ್ರಮವು ವೆಬ್‌ಕಾಸ್ಟ್ ಮೂಲಕ ನಡೆಯಿತು.
- ದಿನಾಂಕ 29–04–2020 ರಂದು ತಪೋನಗರದಲ್ಲಿ ಓರಿಯಂಟೇಶನ್ ತರಗತಿಯು ನಡೆಯಿತು. ಸುಮಾರು 230 ಧ್ಯಾನಿಗಳು ಈ ಲೈವ್ ಸೆಷನ್‌ನಲ್ಲಿ ಭಾಗವಹಿಸಿದರು. ಅನೇಕರಿಗೆ ಋಷಿಗಳ ಇರುವಿಕೆಯ ಅನುಭವವಾಯಿತು ಮತ್ತು ಬಹುತೇಕ ಎಲ್ಲರೂ ಅದ್ಭುತ ಚೈತನ್ಯಗಳನ್ನು ಮತ್ತು ಅಪಾರ ಶಾಂತಿಯನ್ನು ಅನುಭವಿಸಿದರು.
- ಲೈಟ್ ಚಾನಲಿಂಗ್ ಕಾರ್ಯವನ್ನು ಮುಂದುವರಿಸಲು ಇಚ್ಛಿಸುವ ಲೈಟ್ ಚಾನಲಿಂಗ್ ಕಾರ್ಯಕರ್ತರು ತಮ್ಮ ಹೆಸರುಗಳನ್ನು ಮರುನೊಂದಾಯಿಸಲು ವಿನಂತಿಸುತ್ತೇವೆ. ಈ ಕಾರ್ಯದಲ್ಲಿ ಭಾಗವಹಿಸುವುದಕ್ಕೆ ಬಯಸುವ ಹೊಸ ವಿದ್ಯಾರ್ಥಿಗಳು ಕೂಡ ನೋಂದಾಯಿಸಿಕೊಳ್ಳಬಹುದು. ಶ್ರೀ ಮನೋಜ್ ಚೋಪ್ರರವರಿಗೆ ನೀವು ಸಂದೇಶ ಕಳುಹಿಸುವ ಮೂಲಕ ಅಥವ ಮಾನಸ ಆಫೀಸಿಗೆ ಅಥವ ಶ್ರೀ ಮನೋಜ್ ಚೋಪ್ರರವರಿಗೆ ಇಮೇಲ್ ಕಳುಹಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು.
- ಹೀಲಿಂಗ್ ಕೆಲಸವನ್ನು ಮುಂದುವರಿಸಲು ಇಚ್ಛಿಸುವ ಹೀಲಿಂಗ್ ಗ್ರೂಪಿನ ಸದಸ್ಯರು ತಮ್ಮ ಹೆಸರುಗಳನ್ನು ಮರು ನೋಂದಾಯಿಸಲು ವಿನಂತಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಭಾಗವಹಿಸುವುದಕ್ಕೆ ಬಯಸುವ ಹೊಸ ವಿದ್ಯಾರ್ಥಿಗಳು ಕೂಡ ನೋಂದಾಯಿಸಿಕೊಳ್ಳಬಹುದು. ಶ್ರೀ ಮನೋಜ್ ಚೋಪ್ರರವರಿಗೆ ನೀವು ಸಂದೇಶ ಕಳುಹಿಸುವ ಮೂಲಕ ಅಥವ ಮಾನಸ ಆಫೀಸಿಗೆ ಅಥವ ಶ್ರೀ ಮನೋಜ್ ಚೋಪ್ರರವರಿಗೆ ಇಮೇಲ್ ಕಳುಹಿಸುವ ಮೂಲಕ ನೋಂದಾಯಿಸಿಕೊಳ್ಳಬಹುದು.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಸೋಮ | ಶುಕ್ಲ ದಶಮಿ |
| 05 | ಶುಕ್ರ | ಪೂರ್ಣಿಮಾ<br>ಚಂದ್ರ ಗ್ರಹಣ:<br>ರಾತ್ರಿ 11:15 ರಿಂದ 2:34 |
| 13 | ಶನಿ | ಕೃಷ್ಣ ಅಷ್ಟಮಿ |
| 20 | ಶನಿ | ಮಾಸ ಶಿವರಾತ್ರಿ |
| 21 | ಭಾನು | ಅಮಾವಾಸ್ಯೆ<br>ಸೂರ್ಯ ಗ್ರಹಣ:<br>ಬೆಳಿಗ್ಗೆ 9:14 ರಿಂದ<br>ಮಧ್ಯಾಹ್ನ 3:04 |
| 22 | ಸೋಮ | ಆಷಾಢ ಮಾಸ ಪ್ರಾರಂಭ |
| 28 | ಭಾನು | ಶುಕ್ಲ ಅಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು: ಉಪನ್ಯಾಸಗಳು: ಬೆಳಿಗ್ಗೆ 11–12
ಲೈಟ್ ಚಾನಲಿಂಗ್:
ಮಧ್ಯಾಹ್ನ 12–1

ಜೂನ್ 5ರಂದು, ರಾತ್ರಿ 11:15 ರಿಂದ ಬೆಳಿಗ್ಗೆ 2:34 ರವರೆಗೆ ಚಂದ್ರ ಗ್ರಹಣವಿದೆ ಮತ್ತು ಜೂನ್ 21ರಂದು ಬೆಳಿಗ್ಗೆ 09:14 ರಿಂದ ಮಧ್ಯಾಹ್ನ 3:04 ರವರೆಗೆ ಸೂರ್ಯ ಗ್ರಹಣವಿದೆ. ದಯವಿಟ್ಟು ಗ್ರಹಣದ ಪೂರ್ತಿ ಸಮಯದಲ್ಲಿ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡಿ.

ಜೂನ್ 22ರಂದು ಪ್ರಾರಂಭವಾಗುವ ಆಷಾಢ ಮಾಸದಲ್ಲಿ ಅದ್ಭುತವಾದ ಮತ್ತು ಮಹಾನ್ ಚೈತನ್ಯಗಳನ್ನು ನಾವು ನೇರವಾಗಿ ಪರಬ್ರಹ್ಮ ಲೋಕದಿಂದ ಪಡೆಯುತ್ತೇವೆ. ನಾವು ಈ ತಿಂಗಳು ಪೂರ್ತಿ ಹೆಚ್ಚು ಧ್ಯಾನ ಮಾಡಿ ಈ ಚೈತನ್ಯಗಳನ್ನು ಪಡೆಯಬಹುದು.

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಧ್ಯಾನದ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ಈ ವರ್ಷದ ವಿಶ್ವ ಚಾನಲ್ಸ್ ದಿನದಂದು, ಲೈಟ್ ಚಾನಲಿಂಗ್ ಸೆಷನ್‌ಗಳಿಗೆ ಬೆಳಗ್ಗೆ 8 ಗಂಟೆಗೆ ಮನೆಯಿಂದ ಹೊರಡುವ ಯೋಜನೆ ಮಾಡಿದ್ದೆವು. ಎಂದಿನಂತೆ ನಾನು ಬೆಳಗ್ಗೆ ಬೇಗ ಎದ್ದೆ, ಆದರೆ ಸುಮಾರು 5.50ರ ಸಮಯದಲ್ಲಿ ಇದ್ದಕ್ಕಿದ್ದಂತೆ ತೀವ್ರವಾದ ಹೊಟ್ಟೆ ನೋವಿನಿಂದ ಬಳಲಿದೆ. ನಾನು ನಡುಗುತ್ತಿದ್ದೆ ಹಾಗೂ ಕೆಲಸ ಮಾಡಲಾಗುತ್ತಿರಲಿಲ್ಲ. ಮಂಚದ ಮೇಲೆ ಮಲಗಿಕೊಂಡು ಬೆಳಗಿನ ಉಪಹಾರ ಹೇಗೆ ಸಿದ್ಧಗೊಳಿಸುವುದು ಮತ್ತು ನನ್ನ ಮಗಳನ್ನು ಶಾಲೆಗೆ ಹೇಗೆ ಕಳುಹಿಸುವುದು ಎಂದು ಚಿಂತೆಮಾಡುತ್ತಿದ್ದೆ. ನನ್ನ ಪತಿ ನೋವಿಗೆ ಒಂದು ಮಾತ್ರೆಯನ್ನು ಕೊಟ್ಟರು, ಆದರೆ ನಾನು ಅದನ್ನು ತೆಗೆದುಕೊಳ್ಳಲಿಲ್ಲ. ಈ ವಿಶೇಷವಾದ ದಿನದಂದು ಈ ಅವಕಾಶವನ್ನು ಕಳೆದುಕೊಳ್ಳಬಾರದೆಂದುಕೊಂಡೆ. ನಾನು ಲೈಟ್ ಚಾನಲಿಂಗ್ ಸೆಷನ್‌ಗಳಿಗೆ ಹೋಗಬೇಕಾಗಿರುವುದರಿಂದ ನನ್ನ ಹೊಟ್ಟೆ ನೋವನ್ನು ನಿವಾರಿಸಲು ಬೆಳಕಿಗೆ ಮತ್ತು ಅಮರಾಜಿಯವರಿಗೆ ಪ್ರಾರ್ಥಿಸಿದೆ. ಅರ್ಧ ಗಂಟೆಯ ನಂತರ, ನನ್ನ ನೋವು ಕ್ರಮೇಣವಾಗಿ ಕಡಿಮೆಯಾಯಿತು ಹಾಗೂ ಸ್ವಲ್ಪ ಸಮಯದ ನಂತರ ಮಾಯವಾಯಿತು. ನನ್ನ ಎಲ್ಲಾ ಕೆಲಸಗಳನ್ನು ಮುಗಿಸಿ 8 ಗಂಟೆಗೆ ಹೊರಡಲು ಸಿದ್ಧಳಾದೆ. ಬೆಳಕಿನ ಕೃಪೆ ಮತ್ತು ಅಮರಾಜಿಯವರ ಆಶೀರ್ವಾದದಿಂದ ಎಲ್ಲವೂ ಒಂದು ಪವಾಡದಂತೆ ನಡೆಯಿತು. ಮೊದಲೆ ನಿಗದಿಯಾದಂತೆ ನಾವು ಎಲ್ಲಾ ಸೆಷನ್‌ಗಳನ್ನು ನಡೆಸಿದೆವು ಹಾಗೂ ಹಿಂದಿರುಗಿ ಬರುವಾಗ ಇನ್ನೂ ಒಂದು ಶಾಲೆಯಲ್ಲಿ ಸೆಷನ್ ನಡೆಸಲು ಅವಕಾಶ ದೊರೆತದ್ದು ಕೂಡ ಮತ್ತೊಂದು ಪವಾಡವಾಗಿತ್ತು.

**–ಸುಪ್ರಜ ಚಂದ್ರನ್, ಸ್ವಯಂಸೇವಕಿ**

ನನಗೆ ಲೈಟ್ ಚಾನಲಿಂಗ್ ತಂತ್ರ ಬಹಳ ಇಷ್ಟವಾಯಿತು. ನಾನು ಬೆಳಕನ್ನು ಚಾನಲ್ ಮಾಡುತ್ತಿದ್ದಾಗ, ಒಂದು ಮಾರ್ಗದಲ್ಲಿ ನಡೆಯುತ್ತಿರುವಂತೆ ನನಗೆ ಅನುಭವವಾಯಿತು ಮತ್ತು ಅಲ್ಲಿ ಪ್ರತಿಯೊಬ್ಬರೂ ಸಂತೋಷವಾಗಿದ್ದು ಪ್ರೀತಿಯಿಂದ ತುಂಬಿರುವುದನ್ನು ಕಂಡೆ. ಈ ತಂತ್ರವನ್ನು ಕಲಿಸಿದ್ದಕ್ಕೆ ನಿಮಗೆ ಧನ್ಯವಾದಗಳು.

**–ಸ್ಪರ್ಷ್ ರಂಹಿತ್ ಯಾದವ್, 4ನೇ ತರಗತಿ, ಐಇಎಸ್ ಪ್ರೈಮರಿ ಇಂಗ್ಲೀಷ್ ಮಾಧ್ಯಮ ಶಾಲೆ, ಮುಂಬೈ**

ಲೈಟ್ ಚಾನಲಿಂಗ್ ಸೆಷನ್ ನಡೆಯುತ್ತಿರುವಾಗ ಹೆಚ್ಚಿನ ನೀರವತೆಯ ಅನುಭವವಾಯಿತು ಮತ್ತು ಲೈಟ್ ಚಾನಲಿಂಗ್ ತರಬೇತುದಾರರ ಧ್ವನಿಯನ್ನು ಬಿಟ್ಟು ಬೇರೆ ಯಾವ ಶಬ್ದವೂ ಇರಲಿಲ್ಲ.

–ಗಿರೀಶ್, 7ನೇ ತರಗತಿ, ಪ್ರಕೃತಿ ವಿದ್ಯಾ ಮಂದಿರ್, ತುಮಕೂರು

ಹಿಂದೆ ನಾನು ಜನರೊಂದಿಗೆ ಒರಟಾಗಿ ವರ್ತಿಸುತ್ತಿದ್ದೆ, ಆದರೆ ನಿಯತವಾಗಿ ಲೈಟ್ ಚಾನಲ್ ಮಾಡಿದ ನಂತರ ನನ್ನ ವರ್ತನೆಯಲ್ಲಿ ಬದಲಾವಣೆಯಾಗಿದೆ. ಈಗ ನಾನು ಎಲ್ಲರೊಂದಿಗೆ ವಿನಯದಿಂದ ವರ್ತಿಸುತ್ತೇನೆ. ಆಕಸ್ಮಿಕವಾಗಿ ಒರಟಾಗಿ ವರ್ತಿಸಿದರೆ, ತಕ್ಷಣ ಕ್ಷಮೆಯಾಚಿಸುತ್ತೇನೆ.

**– ಪ್ರಿಯ ಸಾಠೆ, 6ನೇ ತರಗತಿ, ಪಿಸಿಎಮ್‌ಸಿ ಸ್ಕೂಲ್, ಪುಣೆ**

ನಾನು ದಿನದಲ್ಲಿ ಎರಡು ಬಾರಿ, ಬೆಳಿಗ್ಗೆ ಮತ್ತು ಸಾಯಂಕಾಲ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ಲೈಟ್ ಚಾನಲ್ ಮಾಡಿದ ನಂತರ ನಾನು ಪ್ರಶಾಂತವಾಗಿರುತ್ತೇನೆ ಮತ್ತು ಸಂತೋಷವಾಗಿರುತ್ತೇನೆ ಹಾಗೂ ನನ್ನ ಏಕಾಗ್ರತೆ ಮತ್ತು ನೆನಪಿನ ಶಕ್ತಿ ಉತ್ತಮಗೊಂಡಿದೆ. ನಾನು ಚಾನಲ್ ಮಾಡುವಾಗ ನನ್ನ ದೇಹದೊಳಗೆ, ತಲೆಯಿಂದ ಕಾಲು ಬೆರಳಿನವರೆಗೂ ಬೆಳಕು ಹಾದು ಹೋಗುತ್ತಿರುವಂತೆ ಭಾಸವಾಗುತ್ತದೆ. ನಾನು ಪಕ್ಷಿಯಾಗಿ ಎತ್ತರೆತ್ತರಕ್ಕೆ ಹಾರುತ್ತಿರುವಂತೆ ಅನುಭವವಾಗುತ್ತದೆ.

**–ಶ್ವೇತ, 10ನೇ ತರಗತಿ, ವಿಶ್ವ ಭಾರತಿ ಸ್ಕೂಲ್, ಉತ್ತರಹಳ್ಳಿ, ಬೆಂಗಳೂರು**

ಲೈಟ್ ಚಾನಲ್ ಮಾಡಿದ ನಂತರ ನಾನು ತುಂಬಾ ಉಲ್ಲಾಸದಿಂದಿದ್ದೆ ಮತ್ತು ನನ್ನ ಮನಸ್ಸು ಸಮಾಧಾನವಾಗಿತ್ತು.

**–ರೋಹಿತ್, 7ನೇ ತರಗತಿ, ಪ್ರಕೃತಿ ವಿದ್ಯಾ ಮಂದಿರ್, ತುಮಕೂರು**

ಸ್ವರ್ಗೀಯ ತು ಗೊ ಗೊಸಾವಿ ಮಾಧ್ಯಮಿಕ ಶಾಲೆ, ವಿಠಲ್‌ವಾಡಿ, ಶ್ರೀ ಮೊಹೊಲ್, ಶಾಲೆಯಲ್ಲಿ ಲೈಟ್ ಚಾನಲಿಂಗ್ ತಂಪಾಗಿ ಮತ್ತು ಪ್ರಶಾಂತವಾಗಿದ್ದರಿಂದ, ಸೆಷನ್ ಮುಗಿದ ನಂತರ ನಾನು ವಿದ್ಯಾರ್ಥಿಗಳಿಗೆ ಕಣ್ಣು ತೆರೆಯಿರಿ ಎಂದು ಹೇಳಬೇಕಾಯಿತು. ಕೆಲ ವಿದ್ಯಾರ್ಥಿಗಳು ಆಳವಾದ ನಿದ್ದೆಯಲ್ಲಿದ್ದರು. ನಾನು ಕೂಡ ಒಳ್ಳೆಯ ಚೈತನ್ಯಗಳನ್ನು ಅನುಭವಿಸಿದೆ.

**–ಸಂತೋಷ್ ಕೊರೆ, ಸ್ವಯಂಸೇವಕ**

ಜಿಕೆಎಂಪಿ ಶಾಲೆಯಲ್ಲಿ ಲೈಟ್ ಚಾನಲಿಂಗ್ ಮಾಡುವಾಗ, ಮಕ್ಕಳು ಹೆಚ್ಚು ಶಿಸ್ತಿನಿಂದ ಇದ್ದುದನ್ನು ಗಮನಿಸಿದೆ. ಎಲ್ಲರೂ ಅಚ್ಚುಕಟ್ಟಾಗಿ ಸಾಲಿನಲ್ಲಿ ಕುಳಿತಿದ್ದರು ಮತ್ತು ಮಾತಾಡುತ್ತಿರಲಿಲ್ಲ, ಮತ್ತು ಮುಕ್ತವಾಗಿ ಉತ್ತರವನ್ನು ಕೊಡುತ್ತಿದ್ದರು ಹಾಗು ಪ್ರತಿಕ್ರಿಯಿಸುತ್ತಿದ್ದರು. ಶಿಕ್ಷಕರು ಹೆಚ್ಚು ಉತ್ಸಾಹದಿಂದ ಕಾರ್ಯನಿರ್ವಹಿಸಿದರು.

**–ನಿರ್ಮಲ ಬಾಲ, ಸ್ವಯಂಸೇವಕಿ**

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ. ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ. ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ. ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

### ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**

**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಮೇ 2006 (ಮುಂದುವರೆದುದು)

ನಾನು ತುಂಬ ಚಿಕ್ಕವನಿದ್ದಾಗ, ಭಗವಾನ್ ಬುದ್ಧರ ಬೋಧನೆಗಳನ್ನು ಪುಸ್ತಕಗಳಲ್ಲಿ ಓದಿದ್ದೆ. "ಆಸೆಯೇ ದು:ಖಕ್ಕೆ ಮೂಲ," ಎಂದು ಓದಿದ್ದೆ. ಸಹಜವಾಗಿ, ಅದೇನೆಂದು ನಮಗೆ ಅರ್ಥವಾಗಲಿಲ್ಲ. ನಾನು ಬೆಳೆದಂತೆ, ಗಂಭೀರ ವಿಷಯಗಳ ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ, ಈ ಎಲ್ಲ ವಿಷಯಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದೆ. ಈ ಹೇಳಿಕೆಯ ಬಗ್ಗೆ, ಈ ಸತ್ಯದ ಬಗ್ಗೆ ನನಗೆ ಅರಿವಿತ್ತು. ಅದು ನನ್ನ ಮನಸ್ಸಿನಲ್ಲಿ ಇತ್ತು, ನನ್ನೊಳಗೆ ಇತ್ತು. ಇದರ ವಾಸ್ತವದ ಬಗ್ಗೆ ನನಗೆ ಅರಿವಿತ್ತು, ಆದರೆ ಅದು ನನಗೆ ತೊಂದರೆ ಕೊಡಲಿಲ್ಲ. ನನ್ನ ಗುರುವನ್ನು ಭೇಟಿ ಮಾಡಿದಾಗ, ಅದು ನನಗೆ ತೊಂದರೆ ಕೊಡಲಾರಂಭಿಸಿತು. ನನ್ನ ಗುರು ಹೇಳಿದರು, "ಸತ್ಯ ಎಂದು ನೀನು ಅಂದುಕೊಂಡಿರುವುದೆಲ್ಲವನ್ನೂ ಬದುಕಿನಲ್ಲಿ ಆಚರಣೆಗೆ ತರಲಾರಂಭಿಸಬೇಕು. ಆಚರಣೆಗೆ ತರದಿದ್ದರೆ, ಉಪನ್ಯಾಸಗಳನ್ನು ಕೇಳುವುದರಲ್ಲಿ ಮತ್ತು ಪುಸ್ತಕಗಳನ್ನು ಓದುವುದರಲ್ಲಿ ಯಾವ ಅರ್ಥವೂ ಇಲ್ಲ". ನಂತರ ನನಗೆ ಸಮಸ್ಯೆಗಳು ಶುರುವಾದವು! ಅದು ಸುಲಭವಾಗಿರಲಿಲ್ಲ; ಈಗಲೂ ಕೂಡ ಸುಲಭವಾಗಿಲ್ಲ. ನನಗೂ ಅಷ್ಟೆ, ನಮ್ಮೆಲ್ಲರಿಗೂ ಅಷ್ಟೆ.

ನಾನು ನನ್ನ ಗುರುವನ್ನು ಭೇಟಿಯಾದ ನಂತರ ನನಗೆ ಪ್ರಪಂಚ ಬದಲಾಯಿತು. ಜೀವನ ಬಹಳ ಕಷ್ಟವಾಯಿತು ಆದರೆ ಅದು ಬಹಳ ಸುಂದರವಾಗಿಯೂ ಇತ್ತು. ನನ್ನ ಜೀವನ ಶುರುವಾಗಿದ್ದೇ ಆ ಸಮಯದ ನಂತರ ಎಂದು ನಾನು ಹೇಳಬೇಕಾಗಿದೆ. ನಾವು ಕಷ್ಟಪಟ್ಟಿದ್ದರಿಂದ, ಈ ವಿಷಯಗಳನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳಲು ಶುರು ಮಾಡಿದೆವು. ನಮಗೆ ಆಸೆಗಳು ಇರಬೇಕೆಂದು ಈಗ ಈ ಹಂತದಲ್ಲಿ ನನಗೆ ಅರಿವಾಗಿದೆ. ಆಸೆ ಇದ್ದಿರಲೇ ಬೇಕು, ಆದುದರಿಂದಲೇ ಈ ಸೃಷ್ಟಿ ಇದೆ. ಆಸೆ ಇಲ್ಲದಿದ್ದರೆ, ಜೀವನವೇ ಇಲ್ಲ. ಆದರೆ ನಾನು ಋಷಿಗಳ ಜೊತೆ ಸಂಪರ್ಕದಲ್ಲಿರಲು ಪ್ರಾರಂಭಿಸಿದ ಮೇಲೆ, ನಮ್ಮ ಆಸೆಗಳನ್ನು ದೇವರ ಆಸೆಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ತಿಳಿಯಿತು. ದೇವರಿಗೆ ಆಸೆ ಇತ್ತು. ಅವನು ಈ ವಿಶ್ವವನ್ನು ಸೃಷ್ಟಿಸಿದ, ಈ ಬದುಕನ್ನು ಇತ್ಯಾದಿಗಳನ್ನು ಸೃಷ್ಟಿಸಿದ. ನಾನು ನನ್ನ ವೈಯಕ್ತಿಕ ಆಸೆಗಳನ್ನು ಅವನ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕು. ನನ್ನ ಆಸೆ ಮತ್ತು ಅವನ ಆಸೆ ಒಂದೇ ಆಗಿದ್ದಾಗ, ಬಹುಶಃ ಅಲ್ಲಿ 'ಯೋಗ' ಸಂಭವಿಸುತ್ತದೆ. ಇದು ಒಂದು ಅತ್ಯಂತ ಸುಂದರವಾದ ವಿಷಯ. ನಂತರ ಅಲ್ಲಿ ಯಾವ ನೋವೂ ಇರುವುದಿಲ್ಲ, ಅಲ್ಲಿ ಯಾವ ಕಷ್ಟಗಳೂ ಇರುವುದಿಲ್ಲ. ಒಬ್ಬ ಬಡವನಾಗಿರಬಹುದು, ಒಬ್ಬ ಹಸಿದುಕೊಂಡಿರಬಹುದು, ಆದರೆ 'ಆಸೆಗಳ ಯೋಗ' ಇದ್ದರೆ ಅವನು ಯಾತನೆಗೊಳಗಾಗುವುದಿಲ್ಲ. ನೆನ್ನೆ ಬುದ್ಧ ಜಯಂತಿ ಇತ್ತು, ನಾನು ಯೋಚಿಸಿದೆ, "ಭಗವಾನ್ ಬುದ್ಧ ನಮಗೆ ಇದನ್ನು ಬೋಧಿಸಿದರಾ?" ಹೌದು ಎನಿಸುತ್ತದೆ, ಅವರೇ ಈ ರೀತಿ ಕಲಿಸಿರಬೇಕು. ನನಗೆ ಗೊತ್ತಿಲ್ಲ... ಇದು ನನ್ನ ವೈಯಕ್ತಿಕ ಅಭಿಪ್ರಾಯ. "ಆಸೆಗಳನ್ನು ಇಟ್ಟುಕೊಳ್ಳಬೇಡಿ," ಎಂದು ಅವರು ಹೇಳಿರಲಾರರು. "ನಿಮ್ಮ ವೈಯಕ್ತಿಕ ಆಸೆಗಳನ್ನು ಬಿಡಿ, ಅವನ ಆಸೆಗಳನ್ನು ಇಟ್ಟುಕೊಳ್ಳಿ," ಎಂದು ಅವರು ಹೇಳಿರಬೇಕು.

ಗಂಗೇಶ್ವರಾನಂದ ಎಂಬುವರೊಬ್ಬರ ಬಗ್ಗೆ ನಾನು ನಿಮಗೆ ಹೇಳಿರಲೇಬೇಕು. ಅವರು ಈಗ ಇಲ್ಲ. ನಾನು ಬಹಳ ಸಲ ಅವರ ಬಗ್ಗೆ ಹೇಳಿದ್ದೇನೆ. ನನ್ನ ಗುರು ಅವರ ಬಗ್ಗೆ ಮಾತನಾಡಿದ್ದರು. ನನ್ನ ಗುರು ಅವರನ್ನು ಭೇಟಿ ಮಾಡಿದ್ದರು. ಚಿಕ್ಕ ಹುಡುಗನಾಗಿದ್ದಾಗ ಅವರು ಹಸುಗಳನ್ನು ಮೇಯಿಸುತ್ತಿದ್ದರು; ಅವರಿಗೆ ಓದುಬರಹ ಗೊತ್ತಿರಲಿಲ್ಲ; ಅವರು ಹಳ್ಳಿಯ ಹುಡಗನಾಗಿದ್ದರು. ನಂತರ ಒಂದು ದಿವಸ, ಅವರು ಶ್ರೀ ಕೃಷ್ಣನನ್ನು ನೋಡಿದರು. ಅವರಿಗೊಂದು ದೃಶ್ಯ ಗೋಚರಿಸಿತ್ತು, ಅವರಿಗೆ ಶ್ರೀ ಕೃಷ್ಣನ ದರ್ಶನವಾಗಿತ್ತು. ಶ್ರೀ ಕೃಷ್ಣ ಅವರನ್ನು ಕೇಳಿದರು, "ನಿನಗೆ ಏನು ಬೇಕು?". ಅವರು ಹೇಳಿದರು, "ನನ್ನನ್ನು ಕುರುಡನನ್ನಾಗಿ ಮಾಡಿ. ನಿಮ್ಮನ್ನು ನೋಡಿದ ಮೇಲೆ ನಾನು ಇನ್ನೇನನ್ನೂ ನೋಡಲು ಬಯಸುವುದಿಲ್ಲ." ಅವರು ಕುರುಡಾದರು. ಆವರ ಜೀವನವೇ ಬದಲಾಯಿತು. ಸುಮಾರು ಘಟನೆಗಳು ನಡೆದವು. ಒಂದೇ ಒಂದು ದರ್ಶನ ಜೀವನವನ್ನೇ ಬದಲಾಯಿಸುತ್ತದೆ.

ನಾನು ಹಿಂದೆ ಹೋಗುತ್ತೇನೆ, 25 ವರ್ಷಗಳಲ್ಲ... ನಾನು 1977ರಲ್ಲಿ ನನ್ನ ಗುರುವನ್ನು ಭೇಟಿಯಾದ ವರ್ಷಕ್ಕೆ ಹಿಂದಿರುಗಿ ಹೋಗುತ್ತೇನೆ. ಅದು ಹೇಗೋ, ನಾನು ಬಹು ದೊಡ್ಡ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ನನಗೆ ತಿಳಿದಿತ್ತು. ಹೇಗೋ ನನಗೆ ತಿಳಿದಿತ್ತು, ಅದು ಹೇಗೆಂದು ನಾನು ವಿವರಿಸಲಾರೆ. ನಾನು ಯಾರಿಗೂ ಹೇಳಲಿಲ್ಲ. ಅಮರರವರ ಜೊತೆ ಮೊದಲನೆಯ ಬಾರಿ ಮನೋವತಿಗೆ ಹೋದಾಗ, ನಾನು ಅಲ್ಲಿ ವಾಸಿಸುವವನಿದ್ದೇನೆಂದು ನನಗೆ ಗೊತ್ತಿತ್ತು. ಆದರೆ ಆ ಸ್ಥಳವನ್ನು ಬಿಡಬೇಕಾಗುತ್ತದೆಂದು ನನಗೆ ಯಾವಾಗಲೂ ತಿಳಿದಿರಲಿಲ್ಲ. ಈ ಸ್ಥಳದಿಂದ ನನ್ನ ಮೃತದೇಹ ಕೂಡ ಹೊರಹೋಗುವುದಿಲ್ಲವೆಂದು ತಮಾಷೆ ಮಾಡುತ್ತಿದ್ದೆ! ಆದರೆ ಬದಲಾವಣೆಗಳು ಬಂದಾಗ ನಾವು ಅವುಗಳನ್ನು ಒಪ್ಪಿಕೊಳ್ಳಬೇಕು. ಪ್ರತಿಯೊಂದು ಬದಲಾವಣೆ, ಒಳ್ಳೆಯದು ಅಥವ ಕೆಟ್ಟದು, ಎಲ್ಲ ಘಟನೆಗಳು, ಎಲ್ಲ ಕ್ರಿಯೆಗಳು ದೇವರಿಂದ ಬಂದ ಉಡುಗೊರೆ. ನಾವು ಎಲ್ಲವನ್ನು ಸ್ವೀಕರಿಸಬೇಕು, ಅದರ ಬಗ್ಗೆ ವಿಷಾದ ಪಡಬಾರದು. ನಾವು ಜವಾಬ್ದಾರಿಯನ್ನು ವಹಿಸಿಕೊಂಡಾಗ, ಕೆಲಸವನ್ನು ವಹಿಸಿಕೊಂಡಾಗ, ಅದೇ ನಮ್ಮ ಜೀವನದ ಅತಿ ಮುಖ್ಯವಾದ ಗುರಿಯಾಗಬೇಕು. ಇದು ಆ ಸಮಯದಲ್ಲಿಯೇ, 25 ವರ್ಷಗಳ ಹಿಂದೆಯೇ ನನಗೆ ಅರಿವಾಯಿತು ಮತ್ತು ಈಗಲೂ ಕೂಡ ನನಗೆ ಸ್ಪಷ್ಟವಾಗಿ ಇದರ ಅರಿವಿದೆ. ನಾನು ತ್ಯಾಗ ಎಂಬ ಪದವನ್ನು ಬಳಸುವುದಿಲ್ಲ. ಅದು ಬಹಳ ದೊಡ್ಡ ಪದ. ಆದರೆ, ನಾವು ಬಹಳಷ್ಟು ವೈಯಕ್ತಿಕ ವಿಷಯಗಳನ್ನು, ಸಂಬಂಧಗಳನ್ನು ಬಿಡಬೇಕಾಗುತ್ತದೆ. ನಾನು ನನ್ನ ಸಂಸಾರವನ್ನು ಬುದ್ಧ ಬಿಟ್ಟರೀತಿಯಲ್ಲಿ ಬಿಡಲಿಲ್ಲ. ಈಗಲೂ ನನ್ನ ಸಂಸಾರವನ್ನು ಪ್ರೀತಿಸುತ್ತೇನೆ ಆದರೆ ಈಗ ನಾನು ಸಂನ್ಯಾಸಿಯಾಗಿದ್ದೇನೆ... ನಾನು ಸಂನ್ಯಾಸಿಯಂತೆಯೇ ಬದುಕಬೇಕು. 3ನೇ ಭಾನುವಾರದ ಚೆಕ್-ಅಪ್ ದಿನಗಳಲ್ಲಿ, 10 ಗಂಟೆಗೆ ಸರಿಯಾಗಿ ಋಷಿಯೊಬ್ಬರು ಬರುತ್ತಾರೆ. ಅವರು ಬಹಳ ದೂರದಿಂದ ಬರುತ್ತಾರೆ. ನೀವು ಇದನ್ನು ಅರಿತರೆ, ಈ ಕಾರ್ಯದ ಮಹತ್ವವನ್ನು ನೀವು ಅರಿತರೆ ಮತ್ತು ನಮಗೆ ಬಹಳಷ್ಟನ್ನು ಕೊಟ್ಟಿರುವ ಮಾಸ್ಟರ್‌ಗಳ ನಿರೀಕ್ಷೆಯೇನು ಎಂದು ಅರಿತರೆ ನಾವು ಏನನ್ನೂ ಮತ್ತು ಎಲ್ಲವನ್ನೂ ಬಿಡುತ್ತೇವೆ. ಕೆಲವೊಮ್ಮೆ ಜನರು ತಪ್ಪು ತಿಳಿಯುತ್ತಾರೆ ಆದರೆ ಅದನ್ನು ಕೂಡ ನಾವು ಸ್ವೀಕರಿಸಬೇಕು. ನಾವು ಎಲ್ಲರನ್ನೂ ಮೆಚ್ಚಿಸುವುದಕ್ಕೆ ಆಗುವುದಿಲ್ಲ. ಕೆಲಸ ಮುಖ್ಯ. ಅಮರರವರು ದೇಹವನ್ನು ಬಿಟ್ಟಾಗ ಯಾರಾದರೊಬ್ಬರು ಜವಾಬ್ದಾರಿಯನ್ನು ವಹಿಸಿಕೊಳ್ಳಲೇಬೇಕಾಗಿತ್ತು. ಅದು ನಾನೇ ಎಂದು ನನಗೆ ಗೊತ್ತಿತ್ತು, ಆದರೆ ಯಾರಿಗೂ ಹೇಳಲಿಲ್ಲ. ಅದು ನಾನೇ ಎಂದು ಬಹುಶಃ ಅವರಿಗೆ ತಿಳಿದಿದ್ದಿರಬೇಕು, ಆದರೆ ಅವರ ನಂತರ ನಾನೇ ಎಂದು ಅವರು ಘೋಷಿಸಲಿಲ್ಲ. ನಾನು ಅವರ ನಿರೀಕ್ಷೆಗಳನ್ನು ಈಡೇರಿಸಬೇಕಿತ್ತು. ನಾನು ಮಾಡಲೇ ಬೇಕಿತ್ತು. ಅದು ಸಹಜ ಪ್ರಕ್ರಿಯೆಯಂತೆ ಇತ್ತು, ನನ್ನನ್ನು ನಂಬಿ, ನನ್ನಲ್ಲಿ ದೊಡ್ಡದೇನೂ ಇಲ್ಲ. ನನ್ನ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ ಅವರೂ ಅದನ್ನೇ ಮಾಡುತ್ತಿದ್ದರು. ನಾನು ಸಂತೋಷವಾಗಿದ್ದೇನೆ. ನಾನು ಬಹಳ ತೃಪ್ತನಾಗಿದ್ದೇನೆ. ನಾನು ಸಂನ್ಯಾಸಿ ಎಂದು ಬೇರೆಯವರಿಗೆ ಜ್ಞಾಪಿಸುವುದಕ್ಕಿಂತ ಹೆಚ್ಚಾಗಿ ನನಗೆ ನಾನೇ ಜ್ಞಾಪಿಸಿಕೊಳ್ಳುತ್ತೇನೆ. ಈ ಹುಟ್ಟುಹಬ್ಬದ ನಂತರದಿಂದ ಆ ಸಂನ್ಯಾಸತ್ವಕ್ಕೆ ಹೆಚ್ಚಾಗಿ ಇಳಿಯುತ್ತೇನೆ. ನಾನು ಏಕಾಂಗಿಯಾಗಿರಲು ಬಯಸುತ್ತೇನೆ, ಅದರ ಅರ್ಥ ನಾನು ನಿಮಗೆ ಬಹಳ ಹತ್ತಿರವಾಗುತ್ತೇನೆ. ಈ ಕ್ಷಣದಿಂದಾಚೆ, ಮುಖ್ಯವಾಗಿ ಮುಂದಿನ ಎರಡು ವರ್ಷಗಳಲ್ಲಿ, ನನ್ನ ಬದುಕಿನಲ್ಲಿ ಅತ್ಯುತ್ತಮವಾದುದನ್ನು ನೀಡಬಲ್ಲೆ ಎಂದು ನನಗೆ ಅನ್ನಿಸುತ್ತಿದೆ. ನೀವೇ ನೋಡುವಿರಿ. ವಾಸ್ತವವಾಗಿ ಇದರಿಂದ ನೀವು ಪ್ರಯೋಜನವನ್ನು ಪಡೆದುಕೊಳ್ಳಬಹುದು. ಆದರೆ ನನಗೆ ಗೊತ್ತಿಲ್ಲ, ನಿಮ್ಮಲ್ಲಿ ಎಷ್ಟು ಮಂದಿ ಹಾಗೆ ಮಾಡಬಲ್ಲಿರೆಂದು. ಆದರೆ ಅದು ಯಾವಾಗಲೂ ಇರುತ್ತದೆ. ನನ್ನನ್ನು ಗಮನಿಸಿಕೊಳ್ಳುವುದನ್ನು ತಪ್ಪದೆ ಮಾಡುತ್ತೇನೆ ಏಕೆಂದರೆ ನನ್ನ ಪ್ರತಿಯೊಂದು ಮಾತನ್ನೂ, ಪ್ರತಿಯೊಂದು ಕಾರ್ಯವನ್ನೂ ಗಮನಿಸಲಾಗುತ್ತದೆ ಮತ್ತು ಕೆಲವೊಮ್ಮೆ ಜನರು ಅದನ್ನು ಅನುಸರಿಸಲು ಪ್ರಯತ್ನಿಸಬಹುದು. ನಾನು ಬಹಳ ಜವಾಬ್ದಾರಿಯುತನಾಗಿರಬೇಕು. ನಾನು ಬಹಳ ಬಹಳ ಜವಾಬ್ದಾರಿಯಿಂದಿರಲು ಪ್ರಯತ್ನಿಸುತ್ತಿದ್ದೇನೆ. ನಾನು ಈ ವಿಷಯಗಳನ್ನೆಲ್ಲ ಹೇಳುತ್ತಿರುವುದಕ್ಕೆ, ನಾವು ಹೊಸ ಹಂತವನ್ನು ಪ್ರವೇಶಿಸುತ್ತಿರುವುದೇ ಕಾರಣವಾಗಿದೆ. ಚಾಲಕನು ವೇಗವಾಗಿ ಚಲಿಸಲು ನಿರ್ಧರಿಸಿದರೆ ಬಸ್ಸಿನಲ್ಲಿ ಇರುವ ಎಲ್ಲರೂ ಅದಕ್ಕೆ ಹೊಂದಿಕೊಳ್ಳಲು ಸಿದ್ಧರಿರಬೇಕು. ನಾನು ಇನ್ನೊಂದು ಹಂತವನ್ನು ಪ್ರವೇಶಿಸಿದಾಗ, ದುರಾದೃಷ್ಟದಿಂದಲೋ ಅಥವಾ ಅದೃಷ್ಟದಿಂದಲೋ, ನೀವೆಲ್ಲರೂ ನನ್ನ ಜೊತೆ ಬರಲೇಬೇಕು. ಪ್ರತಿಯೊಬ್ಬರನ್ನೂ ನನ್ನ ಜೊತೆ ಕರದುಕೊಂಡು ಹೋಗುವುದಕ್ಕೆ ನನಗೆ ಇಷ್ಟವಾಗುತ್ತದೆ. ನಾನು ಯಾವಾಗಲೂ ಅದನ್ನೇ ಮಾಡುತ್ತೇನೆ.■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

05–04–2020

ಧ್ಯಾನ ಮಾಡುವುದಕ್ಕಾಗಿ ತಪೋನಗರದ ಧ್ಯಾನ ಮಂದಿರದಲ್ಲಿ ನಮಗೆ ಸೇರಲು ಸಾಧ್ಯವಾಗುವುದಿಲ್ಲ ಮತ್ತು ನಾವು ಈ ರೀತಿಯಲ್ಲಿ ವರ್ಚುಯಲ್ ತರಗತಿಗಳನ್ನು ನಡೆಸಬೇಕಾಗುತ್ತದೆ ಎಂದು ನಮ್ಮಲ್ಲಿ ಯಾರಿಗೂ ಊಹಿಸಲೂ ಸಾಧ್ಯವಾಗಿರಲಾರದು. ಈಗಲೂ ನಾವು ಸಂಪರ್ಕದಲ್ಲಿರಲು ಸಾಧ್ಯವಾಗಿರುವುದಕ್ಕೆ ಇಂಟರ್‌ನೆಟ್‌ಗೆ ಧನ್ಯವಾದಗಳನ್ನು ಹೇಳಬೇಕು. ಈಗ ನಡೆಯುತ್ತಿರುವ ಘಟನೆಗಳ ಬಗ್ಗೆ ಎಲ್ಲರ ಮನಸ್ಸಿನಲ್ಲೂ ಪ್ರಶ್ನೆಗಳು ತುಂಬಿವೆ – ಏನಾಗುತ್ತಿದೆ? ಈ ಸವಾಲು ನಮಗೇಕೆ ಎದುರಾಗಿದೆ? ವಿಶ್ವದ ಸಂದೇಶವೇನು? ಋಷಿಗಳಿಂದ ಸಂದೇಶವೇನು? ಈ ಪ್ರಶ್ನೆಗಳು ನಮ್ಮಲ್ಲಿ ಏಳುವುದು ಸಹಜವಾಗಿದೆ. ನಾವು ಇದೇ ರೀತಿಯಲ್ಲಿ ಜೀವನ ನಡೆಸಬೇಕೆ? ಅಥವ ನಮ್ಮ ಜೀವನದ ರೀತಿಯನ್ನೇ ಬದಲಾಯಿಸಿಕೊಳ್ಳಬೇಕೆ? ಎಂದು ಎಲ್ಲರೂ ಯೋಚಿಸಲೇ ಬೇಕಾದ ಪರಿಸ್ಥಿತಿಯಿದೆ. ಹೆಚ್ಚು ಕಡಿಮೆ ಎಲ್ಲರೂ ನಡುಗಿ ಹೋಗಿದ್ದಾರೆ. ಈ ರೀತಿ ಆಗುತ್ತಿದೆಯೆಂದು ನಂಬಲು ಜನರಿಗೆ ಸಾಧ್ಯವಾಗುತ್ತಿಲ್ಲ. ಜನರಾರೂ ನಿರೀಕ್ಷಿಸದಿದ್ದ ಈ ಘಟನೆಗಳು ಅನಿರೀಕ್ಷಿತವಾಗಿ ಎರಗಿವೆ. ಈ ಹಿಂದೆ ಅನೇಕ ವಿಕೋಪಗಳನ್ನು, ಅನೇಕ ಯುದ್ಧಗಳನ್ನು ಈ ಪ್ರಪಂಚ ಎದುರಿಸಿದೆ, ಆದರೆ ಅವುಗಳ ಪರಿಣಾಮ ಈ ರೀತಿಯದ್ದಾಗಿರಲಿಲ್ಲ.

ಈ ಪ್ರಪಂಚ ಒಂದು ದೇಹವಿದ್ದಂತೆ, ಜೀವವಿದ್ದಂತೆ. ಪ್ರಪಂಚದ ಯಾವುದೇ ಭಾಗದಲ್ಲಿನ ಯಾವುದೇ ನೋವು ಈ ಭೂಮಿಯ ಮೇಲಿನ ಎಲ್ಲರ ಮೇಲೂ ಪರಿಣಾಮ ಬೀರುತ್ತದೆ. ಇದು ನಮಗೆ ತಿಳಿದಿದೆ ಮತ್ತು ಹಿಂದೆ ನಾವಿದನ್ನು ಅನುಭವಿಸಿದ್ದೇವೆ. ಆದರೆ ಅವು ಈ ರೀತಿಯಲ್ಲಿರಲಿಲ್ಲ, ಈ ತೀವ್ರತೆಯಲ್ಲಿರಲಿಲ್ಲ. ಈ ಕರೋನಾ ವೈರಾಣುವಿನ ಪಿಡುಗು, ಈ ಭೂಮಿಯ ಮೇಲಿನ ಪ್ರತಿಯೊಬ್ಬನ ಮೇಲೂ ನೇರ ಪರಿಣಾಮ ಬೀರಿದೆ. ಸೋಂಕಿತರಿರಲಿ, ಸೋಂಕಿತರಲ್ಲದಿರಲಿ, ಪ್ರತಿಯೊಬ್ಬರನ್ನೂ ಇದು ನೇರವಾಗಿ ತಟ್ಟಿದೆ. ಹಿಂದಿನ ಪ್ರಮುಖ ಘಟನಾವಳಿಗಳಾವುವೂ ಎಲ್ಲರನ್ನೂ ನೇರವಾಗಿ ತಟ್ಟಿರಲಿಲ್ಲ. ಆದರೆ, ನೇರವಾಗಿ ತಟ್ಟಿದ್ದವರು, ಉದಾಹರಣೆಗೆ ಯುದ್ಧಗಳ ಪರಿಣಾಮಗಳನ್ನು ನೇರವಾಗಿ ಅನುಭವಿಸಬೇಕಾಗಿದ್ದವರು, ಖಂಡಿತವಾಗಿ ಬಹಳಷ್ಟು ನೋವು ಮತ್ತು ಯಾತನೆಗಳಿಗೆ ಒಳಗಾಗಬೇಕಿತ್ತು. ಅದು ವಾಸ್ತವ ಸಂಗತಿ. ಆದರೆ ಈ ಹಿಂದೆ, ಪ್ರಪಂಚದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಈ ರೀತಿಯಲ್ಲಿ ಪರಿಣಾಮಕ್ಕೊಳಗಾಗಿರಲಿಲ್ಲ. ಇದು ನಾವು ಹಿಂದೆಂದೂ ಕಂಡಿರದಂತಹ ಪರಿಸ್ಥಿತಿ.

ಋಷಿಗಳಿಂದ ಮತ್ತು ವಿಶ್ವದಿಂದ ಸಂದೇಶವೇನಿದೆ? ನನ್ನ ಆತ್ಮವಾಣಿಯ (intuition) ಸಹಾಯದಿಂದ ಏನನ್ನು ಅರ್ಥಮಾಡಿಕೊಂಡಿದ್ದೇನೆಯೋ ಮತ್ತು ಇಲ್ಲಿ ಗುರೂಜಿಯವರಿಂದ ಏನನ್ನು ಕಲಿತಿದ್ದೇನೆಯೋ ಅವುಗಳನ್ನು ಮಾತ್ರವೇ ನಾನು ಹಂಚಿಕೊಳ್ಳಬಹುದು. ನಿಮ್ಮದೇ ಆದ ರೀತಿಯಲ್ಲಿ ನೀವು ಕೂಡ ಅರ್ಥಮಾಡಿಕೊಂಡಿದ್ದೀರೆಂಬ ಅರಿವು ನನಗಿದೆ. ನಿಮ್ಮೆಲ್ಲರಲ್ಲೂ ನಿಮ್ಮದೇ ಆತ್ಮವಾಣಿಯಿದೆ. ನೀವು ಕೂಡ ವಿಷಯಗಳನ್ನು ಅರ್ಥಮಾಡಿಕೊಳ್ಳುತ್ತೀರಿ. ನಾನು ಈ ವೇದಿಕೆಯಿಂದ ಮಾತನಾಡಬೇಕಿದೆ ಅಷ್ಟೇ. ಬಹುಶಃ ನಾನು ನಿಮ್ಮ ಪರವಾಗಿ ಮಾತನಾಡುವ ವಕ್ತಾರ ಅಷ್ಟೆ.

ನಾವು ಬದುಕಿನಲ್ಲಿ ಎಷ್ಟೊಂದು ಕಾರ್ಯನಿರತರಾಗಿರುತ್ತಿದ್ದೆವೆಂದರೆ, ನಮಗೆ ಅದನ್ನು ನಿಲ್ಲಿಸಲೇ ಸಾಧ್ಯವಾಗುತ್ತಿರಲಿಲ್ಲ, ವಿರಾಮ ತೆಗೆದುಕೊಳ್ಳಲು ಆಗುತ್ತಿರಲಿಲ್ಲ, ಎಂದು ಧ್ಯಾನಿಯಲ್ಲದ ನನ್ನ ಮಿತ್ರರೊಬ್ಬರು ಒಂದು ದಿನ ನನಗೆ ಹೇಳುತ್ತಿದ್ದರು. ಆದರೆ ಈಗ ಎಲ್ಲರೂ ಬಲವಂತವಾಗಿ ವಿರಮಿಸುವಂತಾಗಿದೆ ಮತ್ತು, ಏನಾಗುತ್ತಿದೆ? ನಾನೇನು ಮಾಡಬೇಕಾಗಿದೆ? ಎಂದು ಯೋಚಿಸಲೇ ಬೇಕಾಗಿದೆ. ನಾವೆಲ್ಲರೂ ಆಧ್ಯಾತ್ಮಿಕತೆಯೆಡೆಗೆ ತಿರುಗಬೇಕೆಂದು ಅವರು ಹೇಳಿದರು. ಜನರು ಅರಿತುಕೊಳ್ಳಬೇಕಾಗಿರುವುದೂ ಇದನ್ನೇ. ಇವರಂತಹ, ಯಾವುದೇ ಆಧ್ಯಾತ್ಮಿಕ ಮಾರ್ಗದಲ್ಲಿರದ ಸಾಮಾನ್ಯ ವ್ಯಕ್ತಿಯೊಬ್ಬರು ಈ ರೀತಿ ಹೇಳುವಾಗ, ಅದೇ ಋಷಿಗಳ ಸಂದೇಶವಾಗಿದೆ ಎಂದು ನಾವು ಹೇಳಬೇಕಾಗುತ್ತದೆ ಎಂದು ನನಗನ್ನಿಸುತ್ತದೆ. ಅದೇ ವಿಶ್ವದಿಂದ ಬಂದ ಸಂದೇಶವಾಗಿದೆ. ಇದು ಬೆಳಕನ್ನು ಆಯ್ದುಕೊಳ್ಳುವ ಸಮಯವಾಗಿದೆ. ನಾವು ಬೆಳಕಿನ ಯುಗವನ್ನು ಪ್ರವೇಶಿಸುತ್ತಿದ್ದೇವೆ. ನಾವು ಬೆಳಕಿನೊಂದಿಗೆ ಶ್ರುತಿಯಲ್ಲಿರುವುದನ್ನು ಬೆಳಕಿನ ಯುಗ ನಮ್ಮಿಂದ ಕೋರುತ್ತದೆ. ಬೆಳಕಿನಲ್ಲಿ ಬದುಕುವುದನ್ನು ಬೆಳಕಿನ ಯುಗ ನಮ್ಮಿಂದ ಕೋರುತ್ತದೆ. ಈಗ ನಮಗೆ ಹೆಚ್ಚು ಸಮಯ ಉಳಿದಿಲ್ಲ. ಬೆಳಕಿನ ಯುಗ ನಮ್ಮ ಮನೆ ಬಾಗಿಲಲ್ಲೇ ಇದೆ. ನಾವು ಬಾಗಿಲನ್ನು ತೆಗೆದು, ಬೆಳಕಿನ ಯುಗವನ್ನು ಸ್ವಾಗತಿಸಬೇಕು.

ಬೆಳಕಿನೊಂದಿಗೆ ಸಂಪೂರ್ಣವಾಗಿ ಶ್ರುತಿಗೊಂಡು ಬದುಕನ್ನು ಸಾಗಿಸಲು ನಮಗೆ ಈ ಕೂಡಲೇ ಸಾಧ್ಯವಾಗದಿರಬಹುದು ಎಂದು ಗುರೂಜಿಯವರು ಹೇಳಿದ್ದು ನನಗೆ ನೆನಪಿದೆ, ಅದರ ಅರ್ಥ ನಾವು ರಾತ್ರೋರಾತ್ರಿ ಸಂತರಾಗಲು ಸಾಧ್ಯವಾಗದಿರಬಹುದು. ಅದು ಸರಿಯೇ. ಅದನ್ನು ನಿರೀಕ್ಷಿಸಲಾಗಿಲ್ಲ. ಆದರೆ ನಿರೀಕ್ಷೆಯಿರುವುದು, ನಾವು ಬಾಗಿಲನ್ನು ತೆಗೆಯಬೇಕೆಂದು. ಅದೇ ನಿರೀಕ್ಷೆ. ಸ್ಪಷ್ಟ ಆಯ್ಕೆ ಮಾಡುವುದು ಅತಿ ಮುಖ್ಯ. ಸ್ಪಷ್ಟ ಆಯ್ಕೆ ಅತಿ ಮುಖ್ಯವೆಂದು ನಾವು ಹೇಳಿದಾಗ, ನಿಜವಾಗಿಯೂ ಏನನ್ನು ಹೇಳುತ್ತಿದ್ದೇವೆ? ಅದರ ಅರ್ಥ, ನಾವು ಒಳ್ಳೆಯತನವನ್ನು ಆಯ್ದುಕೊಳ್ಳಬೇಕು ಎಂದು; ನಾವು ಪ್ರಾಮಾಣಿಕತೆಯನ್ನು ಆಯ್ದುಕೊಳ್ಳಬೇಕು ಎಂದು; ನಾವು ಶಾಂತಿಯನ್ನು ಆಯ್ದುಕೊಳ್ಳಬೇಕು ಎಂದು; ನಾವು ಪ್ರೀತಿಯನ್ನು ಆಯ್ದುಕೊಳ್ಳಬೇಕು ಎಂದು. ಇದನ್ನೇ ನಿರೀಕ್ಷಿಸಿರುವುದು.

ರೋಗಾಣುವಿನಿಂದ ರಕ್ಷಿಸಿಕೊಳ್ಳಲು ಇದು ನನಗೆ ಹೇಗೆ ಸಹಾಯ ಮಾಡುತ್ತದೆಯೆಂದು ಯಾರಾದರೂ ಕೇಳಬಹುದು. ಈ ಪ್ರಶ್ನೆ ಕೇಳುವುದು ಸಹಜವೇ ಆಗಿದೆ. ನಮಗೆ ತಿಳಿದಿಲ್ಲ, ಆದರೆ ಇದು ಉಪಯುಕ್ತ ಎಂದು ಹೇಳಬಯಸುತ್ತೇನೆ. ಬದುಕುಳಿಯುವುದರ ಬಗ್ಗೆ ನಾನಿಲ್ಲಿ ಮಾತನಾಡುತ್ತಿಲ್ಲ. ಇದು, ನಾವು ಸಾಯುವ ಅಥವ ಬದುಕುವ ಬಗ್ಗೆ ಅಲ್ಲ. ಒಂದು ದಿನ ನಾವೆಲ್ಲರೂ ಸಾಯಲೇ ಬೇಕು. ಅದು ಬೇರೆ ವಿಷಯ. ಆದರೆ ಇದು, ಹೊಸ ಯುಗವನ್ನು ಆರಿಸಿಕೊಳ್ಳುವ ಅವಕಾಶದ ಬಗ್ಗೆ. ಬೆಳಕನ್ನು ಆರಿಸಿಕೊಂಡಾಗ, ನಾವು ಜವಾಬ್ದಾರಿಯಿಂದ ವರ್ತಿಸುತ್ತೇವೆ. ತಜ್ಞರು ಮತ್ತು ವೈದ್ಯರ ಸೂಚನೆಗಳನ್ನು ನಾವು ಪಾಲಿಸುತ್ತೇವೆ. ಭೌತಿಕ ಮಟ್ಟದಲ್ಲಿ ನಾವು ಎಚ್ಚರಿಕೆ ವಹಿಸುತ್ತೇವೆ. ಮತ್ತು, ಆಧ್ಯಾತ್ಮಿಕ ಮಟ್ಟದಲ್ಲಿ, ಒಳ್ಳೆಯವರಾಗಿರುವುದನ್ನು ಮತ್ತು ಆಧ್ಯಾತ್ಮಿಕ ವ್ಯಕ್ತಿಯಾಗಿರುವುದನ್ನು ಪ್ರಜ್ಞಾಪೂರ್ವಕವಾಗಿ ಆಯ್ದುಕೊಳ್ಳುತ್ತೇವೆ. ಆಯ್ಕೆಯನ್ನು ಒಮ್ಮೆ ಮಾತ್ರ ಮಾಡಿದರೆ ಸಾಕಾಗುವುದಿಲ್ಲ. ನಾವು ಆಯ್ಕೆ ಮಾಡುತ್ತಲೇ ಇರಬೇಕು. ಅಭ್ಯಾಸವಾಗುವವರೆಗೂ ಒಳ್ಳೆಯದನ್ನು ಮತ್ತು ಪ್ರಾಮಾಣಿಕತೆಯನ್ನು ಆಯ್ಕೆ ಮಾಡುತ್ತಲೇ ಇರಬೇಕು.

ಮೇ 7, 2012ರಂದು, ಅತ್ಯಂತ ವಿಶೇಷವಾದ ಲೈಟ್ ಚಾನಲಿಂಗ್ ಕಾರ್ಯಕ್ರಮದಲ್ಲಿ ಗುರೂಜಿಯವರು ಮಾತನಾಡಿದ ವಿಷಯ ಈಗ ಅತ್ಯಂತ ಪ್ರಸ್ತುತವಾಗಿದೆ. ಗುರೂಜಿಯವರು ಋಷಿಗಳೊಂದಿಗೆ ಸ್ಪಷ್ಟ ಸಂಪರ್ಕದಲ್ಲಿರುತ್ತಿದ್ದರು ಎಂದು ನಮಗೆ ತಿಳಿದಿದೆ. ಅವರು ಅತ್ಯಂತ ಅಧಿಕಾರಯುತವಾಗಿ ಮತ್ತು ಅತ್ಯಂತ ಪ್ರಾಮಾಣಿಕವಾಗಿ ಋಷಿಗಳ ಸಂದೇಶವನ್ನು ಹೇಳಿದ್ದರು. ಅದು ಭರವಸೆಯ ಮತ್ತು ಆಶ್ವಾಸನೆಯ ಸಂದೇಶವಾಗಿತ್ತು. ಇದೇ ಅಂತ್ಯವಲ್ಲವೆಂಬ ಭರವಸೆಯಾಗಿತ್ತು, ವಾಸ್ತವದಲ್ಲಿ ಉಜ್ವಲ ಭವಿಷ್ಯ ನಮಗಾಗಿ ಕಾಯುತ್ತಿದೆ. ಋಷಿಗಳಿದ್ದಾರೆ ಎಂಬ ಆಶ್ವಾಸನೆಯನ್ನು ಅವರು ನಮಗೆ ನೀಡಿದರು. ವಾಸ್ತವದಲ್ಲಿ ಋಷಿಗಳು, ಗುರೂಜಿಯವರ ಮೂಲಕ, ತಾವು ನಮ್ಮನ್ನು ಮಾರ್ಗದರ್ಶಿಸುವುದಾಗಿ ಮತ್ತು ರಕ್ಷಿಸುವುದಾಗಿ ಅಶ್ವಾಸನೆ ನೀಡಿದರು. ನಾವು ಆಧ್ಯಾತ್ಮಿಕತೆಯನ್ನು ಪಾಲಿಸಿದರೆ, ಅಂದರೆ, ಒಳ್ಳೆಯವರಾಗಿರುವುದು, ಪ್ರಾಮಾಣಿಕರಾಗಿರುವುದು ಮತ್ತು ಶಾಂತಿಯಿಂದಿರುವುದನ್ನು ಪಾಲಿಸಿದರೆ, ಬಹಳಷ್ಟು ವಿನಾಶಗಳನ್ನು ತಪ್ಪಿಸುವುದಕ್ಕೆ ಋಷಿಗಳಿಗೆ ಸಾಕಷ್ಟು ಸಮರ್ಥನೆ ಸಿಗುತ್ತದೆ, ಎಂದು ಋಷಿಗಳು ಗುರೂಜಿಯವರ ಮೂಲಕ ನಮಗೆ ಹೇಳಿದ್ದಾರೆ.

(ಮುಂದಿನ ಪುಟದಲ್ಲಿ ಮುಂದುವರಿದಿದೆ)

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

(ಪುಟ 5ರಿಂದ ಮುಂದುವರೆದಿದೆ)

ಯಾರನ್ನೂ ಹಿಂದೆ ಬಿಡಲಾಗುವುದಿಲ್ಲವೆಂದು ಗುರೂಜಿಯವರು ನಮಗೆ ಅಶ್ವಾಸನೆ ನೀಡಿದ್ದರು. ಎಲ್ಲರನ್ನೂ ಸೂಕ್ಷ್ಮ ಮಟ್ಟದಲ್ಲಿ ಸಂಪರ್ಕಿಸಿ ಮಾರ್ಗದರ್ಶನ ನೀಡಲಾಗುತ್ತಿದೆ. ಆದ್ದರಿಂದಲೇ, ಋಷಿಗಳ ಅಸ್ತಿತ್ವದ ಬಗ್ಗೆ ಮತ್ತು ಸೂಕ್ಷ್ಮ ಪ್ರಪಂಚಗಳ ಅಸ್ತಿತ್ವಗಳ ಬಗ್ಗೆ ಏನೇನೂ ತಿಳಿಯದಿರುವ ಜನರು ಕೂಡ ಈ ಬಿಕ್ಕಟ್ಟಿನ ಮೂಲಕ ಈ ವಿಶ್ವವು ಏನನ್ನು ತಿಳಿಸಬಯಸುತ್ತಿದೆ ಎನ್ನುವುದನ್ನು ತಿಳಿದಿರುವಂತೆ ಕಾಣಿಸುತ್ತದೆ. ಇದನ್ನು ವಿಶ್ವ ಸೃಷ್ಟಿಸಿದೆಯೆಂದಲ್ಲ. ನಾವು ಕಷ್ಟ ಪಡುವುದನ್ನು ವಿಶ್ವ ಬಯಸುವುದಿಲ್ಲ. ಇದು ಮನುಷ್ಯರ ಸೃಷ್ಟಿಯೇ ಆಗಿದೆ. ನಮಗೆ ಇಚ್ಛಾಸ್ವಾತಂತ್ರ್ಯವಿರುವುದು ನಿಮಗೆ ತಿಳಿದೇ ಇದೆ. ಅಧ್ಯಾತ್ಮಿಕ ನಿಯಮಗಳನ್ನು ಉಲ್ಲಂಘಿಸಲು ಕೂಡ ನಮಗೆ ಸ್ವಾತಂತ್ರ್ಯವಿದೆ. ನಾವು ಅಧ್ಯಾತ್ಮಿಕ ನಿಯಮಗಳನ್ನು ಉಲ್ಲಂಘಿಸಿದಾಗ ಸಹಜವಾಗಿಯೇ ಅದರ ಪರಿಣಾಮಗಳನ್ನು ಆಕರ್ಷಿಸುತ್ತೇವೆ.

ಇದನ್ನು 2012ಕ್ಕೆ ಮುಂಚಿತವಾಗಿಯೇ ನಮಗೆ ಹೇಳಲಾಗಿತ್ತು. ಆ ವರ್ಷವು ಒಂದು ಅವಕಾಶವಾಗಿತ್ತು ಎಂದು ನನಗನಿಸುತ್ತದೆ. ಏನಾಯಿತೆಂದು ನಮಗೆ ಸರಿಯಾಗಿ ತಿಳಿದಿಲ್ಲ. 2012ರಲ್ಲಿ ಏನಾಯಿತೆನ್ನುವುದನ್ನು ಬಹುಶಃ ನಾವು ಭವಿಷ್ಯದಲ್ಲಿ ಮಾತ್ರವೇ ತಿಳಿಯಬಹುದೇನೋ. ನಾವು ಆ ಅವಕಾಶವನ್ನು ಬಳಸಿಕೊಂಡೆವೇ? ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ನಮಗೆ ಆಗಲಿಲ್ಲವೆಂದು ಹೇಳಬೇಕೆನಿಸುತ್ತದೆ. ಆದರೆ ದೇವರ ಪ್ರಪಂಚದಲ್ಲಿ ಅವಕಾಶಗಳು ಎಂದೆಂದಿಗೂ ಕೊನೆಗೊಳ್ಳುವುದಿಲ್ಲ. ಕೊನೆಯಿಲ್ಲದಷ್ಟು ಅವಕಾಶಗಳ ಅನುಗ್ರಹ ನಮಗಿದೆ. ಬೆಳಕನ್ನು ಆಯ್ದುಕೊಳ್ಳದಿದ್ದಾಗಲೂ ಕೂಡ, ಅದನ್ನು ಆಯ್ದುಕೊಳ್ಳಲು ನಮಗೆ ಮತ್ತೊಮ್ಮೆ ಅವಕಾಶ ನೀಡಲಾಗುತ್ತದೆ. ಈಗ ನಮಗೆ ಅವಕಾಶವಿದೆ. ಇದನ್ನು ನಾನು ನಂಬುತ್ತೇನೆ. ನಾವು ತುರ್ತಾಗಿ ಅಧ್ಯಾತ್ಮಿಕರಾಗಬೇಕಾಗಿದೆ. ಗುರೂಜಿಯವರು ಅನೇಕ ವರ್ಷಗಳಿಂದ ಇದನ್ನೇ ಹೇಳುತ್ತಿದ್ದರು. ಅವರು ಋಷಿಗಳ ಸಂದೇಶವಾಹಕರಾಗಿದ್ದರು. ಅವರು, ಹೊಸಯುಗದ ಬಗ್ಗೆ ಮತ್ತು ತುರ್ತಾಗಿ ಬದಲಾಗಬೇಕಾಗಿರುವುದರ ಬಗ್ಗೆ ಮಾತನಾಡಿದ್ದರು. ಅವರು, ವ್ಯವಸ್ಥೆಗಳು ಕುಸಿಯುವ ಬಗ್ಗೆ ಮಾತನಾಡಿದ್ದರು. ಆದರೆ, ಕುಸಿತಗಳ ಬಗ್ಗೆ ಅವರು ಮಾತನಾಡಿದಾಗ, ಕುಸಿತಗಳುಂಟಾದಾಗ ಸ್ವಲ್ಪ ಸಮಯ ಅಲ್ಲಿ ಅವ್ಯವಸ್ಥೆಯುಂಟಾಗಬಹುದು, ಆದರೆ ಹೊಸ ದೈವೀ ವ್ಯವಸ್ಥೆಗಳು ಹಳೆಯ ಭ್ರಷ್ಟ ವ್ಯವಸ್ಥೆಗಳ ಬದಲಿಗೆ ಬರುತ್ತವೆ, ಎಂಬ ಆಶ್ವಾಸನೆಯನ್ನು ನಮಗೆ ಕೊಟ್ಟಿದ್ದರು.

ಋಷಿಗಳು ನಮಗೆ ಅಶ್ವಾಸನೆ ಕೊಟ್ಟಿರುವುದರಿಂದ ನಾವು ಚಿಂತೆ ಮಾಡಬೇಕಾಗಿಲ್ಲ ಅಥವ ಭಯಪಡಬೇಕಾಗಿಲ್ಲ, ಆದರೆ ಬೆಳಕಿನಲ್ಲಿ ಬದುಕುವುದನ್ನು ಈಗ ಪ್ರಾರಂಭಿಸಬಹುದು. ನಾನು ಮಾತನಾಡುತ್ತಿರುವುದು ಹೊಸದೇನೂ ಅಲ್ಲ. ಇಂತಹ ವಿಷಯಗಳನ್ನು ಗುರೂಜಿಯವರಿಂದ ನೂರಾರು ಬಾರಿ ಕೇಳಿದ್ದೇವೆ. ಈ ಪ್ರಪಂಚದ ಅಂತಿಮ ಭವಿಷ್ಯ ಹೊಸಯುಗ, ಎಂದು ನಮಗೆ ತಿಳಿದಿದೆ. ಆ ಹೊಸಯುಗವನ್ನೇ ನಾವು ಎದುರುನೋಡುತ್ತಿರುವುದು. ಆದರೆ ತಕ್ಷಣದ ಭವಿಷ್ಯದಲ್ಲಿ ಏನಾಗುತ್ತದೆ ಅಥವ ಆ ಅಂತಿಮ ಭವಿಷ್ಯವನ್ನು ಹೇಗೆ ತಲುಪುತ್ತೇವೆ ಎನ್ನುವುದು ನಮ್ಮ ಕೈಯಲ್ಲಿದೆ. ಬಹಳ ನೋವುಂಟುಮಾಡುವ ಅನುಭವಗಳ ಹಾದಿಯಲ್ಲಿ ಹೋಗುತ್ತೇವೆಯೋ ಅಥವ ಗೌರವಾನ್ವಿತವಾಗಿ ಅಲ್ಲಿಗೆ ತಲುಪುತ್ತೇವೆಯೋ? ಅದು ನಮ್ಮನ್ನು ಆಧರಿಸಿದೆ. ಭ್ರಷ್ಟ ವ್ಯವಸ್ಥೆಗಳನ್ನು ನಾವಾಗಿಯೇ ತೆಗೆದುಹಾಕಿ ಹೊಸ ದೈವೀ ವ್ಯವಸ್ಥೆಗಳನ್ನು ಸ್ಥಾಪಿಸುತ್ತೇವೆಯೋ ಅಥವ ಭ್ರಷ್ಟ ವ್ಯವಸ್ಥೆಗಳ ಜೊತೆಯಲ್ಲಿಯೇ ಇದ್ದು ಭ್ರಷ್ಟ ವ್ಯವಸ್ಥೆಗಳ ಜೊತೆಗೇ ನಾವೂ ಕುಸಿಯುತ್ತೇವೆಯೋ? ಇದು ನಮ್ಮನ್ನು ಆಧರಿಸಿದೆ.

ವೈಯಕ್ತಿಕ ವ್ಯಕ್ತಿಗಳಾಗಿ ನಾವೇನು ಮಾಡಬಹುದು? ನಾನು ಆಗಲೇ ಹೇಳಿದ ಹಾಗೆ, ಒಳ್ಳೆಯತನವನ್ನು, ಪ್ರಾಮಾಣಿಕತೆಯನ್ನು, ಶಾಂತಿಯನ್ನು ಮತ್ತು ಪ್ರೀತಿಯನ್ನು ನಾವು ಆಯ್ಕೆ ಮಾಡಿಕೊಳ್ಳಬಹುದು. ಹೀಗೆ ಮಾಡಿದಾಗ, ನಮ್ಮದೇ ಗಮನಾರ್ಹ ರೀತಿಯಲ್ಲಿ ಪ್ರಪಂಚಕ್ಕೆ ಸಹಾಯ ಮಾಡುತ್ತಿರುತ್ತೇವೆ. ನಮ್ಮ ಗಮನ ಇದರಲ್ಲಿರಬೇಕು. ಇದನ್ನೇ ನಾನು ನಂಬಿರುವುದು ಮತ್ತು ಅರ್ಥಮಾಡಿಕೊಂಡಿರುವುದು. ಪ್ರಪಂಚ ಕೊನೆಗೊಳ್ಳುವುದಿಲ್ಲ. ಕರೋನ ವೈರಾಣುವಿನೊಂದಿಗೆ ಬದುಕುವುದನ್ನು ಕಲಿಯುತ್ತೇವೆ. ನಾವು ಬದಲಾದರೆ, ಗೌರವದಿಂದ ಸತ್ಯಯುಗದೆಡೆಗೆ ನಡೆಯುತ್ತೇವೆ. ಆದರೆ, ಬದಲಾವಣೆಯನ್ನು ವಿರೋಧಿಸಿದರೆ ಅಥವ ಕೆಟ್ಟ ರೀತಿಯ ಬದುಕಿಗೇ ಜೋತುಬಿದ್ದರೆ, ನಮ್ಮ ಈ ನಡವಳಿಕೆಗೆ ಸೂಕ್ತವಾಗುವಂತಹ ಸ್ಥಿತಿಗತಿಗಳಿರುವ ಮತ್ತೊಂದು ಭೂಮಿಗೆ ನಾವು ಹೋಗಬೇಕಾಗಬಹುದು. ನಾವು ಸ್ಪಷ್ಟ ಆಯ್ಕೆಯನ್ನು ಮಾಡಬೇಕು.

ವೈಯಕ್ತಿಕ ವ್ಯಕ್ತಿಗಳಾಗಿ ನಾವೇನು ಮಾಡಬಹುದು? ನಾನು ಆಗಲೇ ಹೇಳಿದ ಹಾಗೆ, ಒಳ್ಳೆಯತನವನ್ನು, ಪ್ರಾಮಾಣಿಕತೆಯನ್ನು, ಶಾಂತಿಯನ್ನು ಮತ್ತು ಪ್ರೀತಿಯನ್ನು ನಾವು ಆಯ್ಕೆ ಮಾಡಿಕೊಳ್ಳಬಹುದು. ಹೀಗೆ ಮಾಡಿದಾಗ, ನಮ್ಮದೇ ಗಮನಾರ್ಹ ರೀತಿಯಲ್ಲಿ ಪ್ರಪಂಚಕ್ಕೆ ಸಹಾಯ ಮಾಡುತ್ತಿರುತ್ತೇವೆ. ನಮ್ಮ ಗಮನ ಇದರಲ್ಲಿರಬೇಕು. ಇದನ್ನೇ ನಾನು ನಂಬಿರುವುದು ಮತ್ತು ಅರ್ಥಮಾಡಿಕೊಂಡಿರುವುದು. ಪ್ರಪಂಚ ಕೊನೆಗೊಳ್ಳುವುದಿಲ್ಲ. ಕರೋನ ವೈರಾಣುವಿನೊಂದಿಗೆ ಬದುಕುವುದನ್ನು ಕಲಿಯುತ್ತೇವೆ. ನಾವು ಬದಲಾದರೆ, ಗೌರವದಿಂದ ಸತ್ಯಯುಗದೆಡೆಗೆ ನಡೆಯುತ್ತೇವೆ. ಆದರೆ, ಬದಲಾವಣೆಯನ್ನು ವಿರೋಧಿಸಿದರೆ ಅಥವ ಕೆಟ್ಟ ರೀತಿಯ ಬದುಕಿಗೇ ಜೋತುಬಿದ್ದರೆ, ನಮ್ಮ ಈ ನಡವಳಿಕೆಗೆ ಸೂಕ್ತವಾಗುವಂತಹ ಸ್ಥಿತಿಗತಿಗಳಿರುವ ಮತ್ತೊಂದು ಭೂಮಿಗೆ ನಾವು ಹೋಗ ಬೇಕಾಗಬಹುದು. ನಾವು ಸ್ಪಷ್ಟ ಆಯ್ಕೆಯನ್ನು ಮಾಡಬೇಕು.■

# ಪ್ರಶ್ನೋತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನಾವು ಹೇಗೆ ಅಹಂನಿಂದ ಮುಕ್ತರಾಗಬಹುದು?**

ಉ: ನಮಗೆ ಸಂಪೂರ್ಣವಾಗಿ ಅಹಂನಿಂದ ಮುಕ್ತರಾಗುವುದಕ್ಕೆ ಸಾಧ್ಯವಿಲ್ಲ, ಕಾರಣ ನಾವು ಅಹಂಅನ್ನು ಅರ್ಥ ಮಾಡಿಕೊಂಡಿರುವಂತೆ ಈ ಅಹಂ ನಮ್ಮ ವ್ಯಕ್ತಿತ್ವದ ಭಾಗವೇ ಆಗಿದೆ. ದೇಹ, ಮನಸ್ಸು ಮತ್ತು ಬುದ್ಧಿ ಇವುಗಳ ಸಾಮೂಹಿಕ ಬುದ್ಧಿಶಕ್ತಿಯೇ ಅಹಂ ಆಗಿದೆ. ನಾವು ಸಹ ಈ ಪ್ರಪಂಚದಲ್ಲಿ ಈ ಅಹಂ ಮೂಲಕವೇ ಜೀವನ ನಿರ್ವಹಿಸಬೇಕು ಮತ್ತು ಇಲ್ಲಿ ಬದುಕಿರಬೇಕು. ಈ ಸಾಮೂಹಿಕ ಬುದ್ಧಿಶಕ್ತಿ ಸೀಮಿತದ್ದಾಗಿದ್ದರೂ, ಇದು ಯಾವಾಗಲೂ ನಕಾರಾತ್ಮಕವಾಗಿ ಇರಬೇಕಾಗಿಲ್ಲ. ನಮ್ಮ ವ್ಯಕ್ತಿತ್ವಕ್ಕೆ, ಅದನ್ನು ಅಹಂ ಎಂದು ಉಲ್ಲೇಖಿಸಲಾಗುವ ಬೇರೊಂದು ಆಯಾಮ ಇದೆ. ಇದು ಆತ್ಮದ ಮನೋಭಾವ ಆಗಿದೆ. ಗುರೂಜಿ ವಿವರಿಸಿ ಹೇಳಿದಂತೆ ಇದು 'ಆತ್ಮದ ಉದ್ದೇಶಿತ ಆಯ್ಕೆ' ಆಗಿರುತ್ತದೆ. ಆತ್ಮದ ಉದ್ದೇಶಿತ ಆಯ್ಕೆಯು ಈ ಅಹಂಅನ್ನು ನಕಾರಾತ್ಮಕ ಅಥವಾ ಸಕಾರಾತ್ಮಕವನ್ನಾಗಿಸುತ್ತದೆ. ಹೇಗೇ ಆಗಲಿ, ಈ ವ್ಯಕ್ತಿಯು ಪ್ರಶ್ನೆಯನ್ನು ಕೇಳಿರುವುದು ಈ ನಕಾರಾತ್ಮಕ ಮನೋಭಾವನೆಯ ಬಗ್ಗೆ. ಈ ಮನೋಭಾವವು ನಮ್ಮ ಮತ್ತು ದೇವರ ನಡುವೆ ಬರುತ್ತದೆ, ನಮ್ಮ ಮತ್ತು ಬೇರೆಯವರ ನಡುವೆ ಬರುತ್ತದೆ. ನನಗೆ ತಿಳಿದಿರುವಂತೆ ಈ ಮನೋಭಾವದಿಂದ ನಾವು ಪಾರಾಗುವುದಕ್ಕೆ ಸಾಧ್ಯವಿದೆ. ಆ ಕಾರಣದಿಂದಲೇ ನಾವು ಧ್ಯಾನ ಮಾಡುವುದು. ಆ ಕಾರಣದಿಂದಲೇ ನಾವು ಸಕಾರಾತ್ಮಕರಾಗಿರುವುದಕ್ಕೆ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವುದು. ಇದಕ್ಕೆ ಯಾವುದೇ ತಂತ್ರ ಇಲ್ಲ, ಆದರೆ ಪ್ರತಿಯೊಂದೂ ದಿವ್ಯವಾದುದು ಎಂದು ಒಂದು ವೇಳೆ ನಾವು ನಿಜವಾಗಿಯೂ ಒಪ್ಪಿಕೊಳ್ಳುವುದಾದರೆ, ಸುಲಭವಾಗಿ ಈ ನಕಾರಾತ್ಮಕ ಮನೋಭಾವದಿಂದ ಪಾರಾಗಬಹುದು.

**ಪ್ರ: ನಾವು ಎಲ್ಲ ಸಮಯದಲ್ಲೂ ಜಾಗೂರೂಕರಾಗಿರುವುದು ಹೇಗೆ, ಅಂದರೆ ಎಂತಹ ಸಂದರ್ಭದಲ್ಲಿಯೂ ಅಹಂ ಬೆಳೆಯದಂತೆ ಖಾತರಿ ಪಡಿಸಿಕೊಳ್ಳುವುದು ಮತ್ತು ಸದಾ ಕಾಲ ವಿನಮ್ರರಾಗಿರುವುದು ಹೇಗೆ?**

ಉ: ನನಗೆ ಅನಿಸುವಂತೆ ಪ್ರಾರಂಭದಲ್ಲಿ ನಾವು ಪ್ರಜ್ಞಾಪೂರ್ವಕವಾಗಿ ವಿನಮ್ರತೆಯನ್ನು ರೂಢಿಸಿಕೊಳ್ಳಬೇಕು. ನಂತರ ಈ ರೀತಿಯಾಗಿ ಅಭ್ಯಾಸ ಮಾಡಿಕೊಳ್ಳುತ್ತಾ ಹೋದಂತೆಲ್ಲ ಅದೇ ನಮ್ಮ ಜೀವನದ ವಿಧಾನವಾಗುತ್ತದೆ. ಯಾವುದೇ ಸಂದರ್ಭದಲ್ಲಿ ಪ್ರತಿಕ್ರಿಯಿಸುವ ಮೊದಲು ಅಥವಾ ನಾವು ಯಾರ ಜೊತೆಗೆ ಮಾತನಾಡುತ್ತಿದ್ದೇವೆಯೋ ಅವರಿಗೆ ಪ್ರತಿಕ್ರಿಯಿಸುವ ಮೊದಲು ತಕ್ಷಣ ಪ್ರತಿಕ್ರಿಯಿಸದಂತೆ ತಾತ್ಕಾಲಿಕವಾಗಿ ಸುಮ್ಮನಿರಬೇಕು, ಆ ವಿರಾಮದ ಸಮಯದಲ್ಲಿ ನಾವು ಬೆಳಕಿನ ಜೊತೆ ಸಂಪರ್ಕ ಪಡೆಯಲು ಪ್ರಯತ್ನಿಸಬೇಕು, ಎಂದು ಗುರೂಜಿಯವರು ಹೇಳುತ್ತಿದ್ದ ಮಾತು ನೆನಪಾಗುತ್ತದೆ. ನಾವು ಈ ರೀತಿ ಬೆಳಕಿನ ಜೊತೆ ಇದ್ದಾಗ, ಎಲ್ಲ ಸಮಯದಲ್ಲೂ ಜಾಗರೂಕರಾಗಿರುತ್ತೇವೆ ಮತ್ತು ನಮ್ಮಲ್ಲಿ ಅಹಂ ಬೆಳೆಯಲು ಅವಕಾಶ ನೀಡುವುದಿಲ್ಲ.

**ಪ್ರ: ವಾರ್ತಾಪತ್ರದಲ್ಲಿ ತಿಳಿಸಿರುವ ಅನುಭವಗಳು ನನಗೆ ಆಗುತ್ತಿಲ್ಲ? ಏಕೆ ಹೀಗೆ?**

ಉ: ಆಧ್ಯಾತ್ಮಿಕ ಸಾಧನೆ ಪ್ರಾರಂಭಿಸುವುದೆಂದರೆ ಬಸ್ಸೊಂದನ್ನು ಏರಿದಂತೆ, ಎಂದು ಗುರೂಜಿಯವರು ಹೇಳಿದ್ದರು. ನಮ್ಮ ಅಧ್ಯಾತ್ಮಿಕ ಪ್ರಯಾಣ ಪ್ರಾರಂಭವಾಗುತ್ತದೆ. ಕೆಲವರು ಕಿಟಕಿಯ ಹತ್ತಿರ ಕುಳಿತುಕೊಳ್ಳುವರು ಮತ್ತೆ ಕೆಲವರು ಮಧ್ಯದಲ್ಲಿ ಕುಳಿತುಕೊಳ್ಳುವರು ಇನ್ನು ಕೆಲವರು ಮತ್ತೊಂದು ಬದಿಯಲ್ಲಿ ಕುಳಿತುಕೊಳ್ಳುವರು. ಬಸ್ಸು ಚಲಿಸುತ್ತಿದ್ದಂತೆ, ಕಿಟಕಿ ಹತ್ತಿರ ಕುಳಿತಿರುವ ವ್ಯಕ್ತಿ ಏನು ನೋಡುತ್ತಾನೋ, ಅದನ್ನು ಬೇರೆ ಸ್ಥಳದಲ್ಲಿ ಕುಳಿತಿರುವ ವ್ಯಕ್ತಿ ನೋಡುವುದಿಲ್ಲ. ಆದರೆ ಬಸ್ಸಿನಲ್ಲಿ ಕುಳಿತಿರುವ ಎಲ್ಲರೂ ಪ್ರಯಾಣಿಸುತ್ತಿರುವುದು ಖಂಡಿತ. ಕೆಲವರು ನಿದ್ರಿಸುತ್ತಾ ಏನನ್ನೂ ನೋಡದಿರಬಹುದು, ಆದರೆ ಅವರು ಸಹ ಬಸ್ಸಿನೊಂದಿಗೆ ಪ್ರಯಾಣಿಸುತ್ತಿರುತ್ತಾರೆ. ಅದೇ ರೀತಿ ಕೆಲವು ಜನರಲ್ಲಿ ಅವರ ಆಂತರಿಕ ಸಾಮರ್ಥ್ಯಗಳು ತೆರೆದುಕೊಂಡಿರಬಹುದು, ಬಹುಶ: ಅವರ ಹಿಂದಿನ ಸಾಧನೆಯ ಫಲವಾಗಿ. ಅವರಿಗೆ ಕೆಲವು ವಿಶೇಷ ಅನುಭವಗಳಾಗಬಹುದು, ದೃಶ್ಯಗಳು ಗೋಚರಿಸಬಹುದು. ಅವರಿಗೆ ಸೂಕ್ಷ್ಮ ಮಟ್ಟದವುಗಳನ್ನು ವೀಕ್ಷಿಸಲು ಸಾಧ್ಯವಿರಬಹುದು. ಆದರೆ, ನಮಗೆ ಈ ರೀತಿಯ ಅನುಭವಗಳಾಗುತ್ತಿಲ್ಲವೆಂದು ನಿರಾಶರಾಗಬೇಕಾಗಿಲ್ಲ. ಈ ಮಾರ್ಗದಲ್ಲಿ ಸಾಧನೆಯನ್ನು ಬಿಡದೆ ಮುಂದುವರಿಸಿದರೆ ನಾವು ಕೂಡ ಬೆಳೆಯುತ್ತೇವೆ. ಮಹರ್ಷಿ ಅಮರರವರು ಹೇಳಿರುವಂತೆ, "ಅನುಭವಗಳು ಒಳ್ಳೆಯದೇ, ಆದರೆ ಅನುಭವಗಳು ಆಗದೇ ಇರುವುದು ಇನ್ನೂ ಒಳ್ಳೆಯದು." ನಮ್ಮ ಅಧ್ಯಾತ್ಮಿಕ ಪ್ರಗತಿಗೆ ಅನುಭವಗಳು ಮಾನದಂಡವಲ್ಲ. ವಾರ್ತಾಪತ್ರದಲ್ಲಿ ಪ್ರಕಟಗೊಂಡ ಅನುಭವಗಳು ನಮ್ಮನ್ನು ಪ್ರೇರೇಪಿಸುತ್ತವೆ ಮತ್ತು ನಮ್ಮ ಸಾಧನೆಯನ್ನು ಮುಂದುವರಿಸುವುದಕ್ಕೆ ಪ್ರೋತ್ಸಾಹಿಸುತ್ತವೆ, ಮತ್ತು ನಮ್ಮ ನಂಬಿಕೆಯನ್ನೂ ಬಲಪಡಿಸುತ್ತವೆ.

**ಪ್ರ: ನಾವು ಅ-ಪ್ರೀತಿಯನ್ನು ಹೇಗೆ ಮೀರಿ ಬೆಳೆಯಬಹುದು?**

ಉ: ನಮ್ಮೊಳಗೆ ಪ್ರೀತಿಯನ್ನು ತುಂಬಿಕೊಳ್ಳುವುದರಿಂದ ಮತ್ತು ಪ್ರೀತಿಯನ್ನು ಅಭಿವ್ಯಕ್ತಪಡಿಸುವುದರಿಂದ ಅ-ಪ್ರೀತಿಯನ್ನು ಮೀರಿ ಬೆಳೆಯಬಹುದು. ಪ್ರೀತಿಯನ್ನು ನಮ್ಮಲ್ಲಿ ತುಂಬಿಸಿಕೊಂಡಿದ್ದಾಗ, ಪ್ರೀತಿಯನ್ನು ಅಭಿವ್ಯಕ್ತಪಡಿಸಿದಾಗ, ನಮ್ಮಲ್ಲಿ ಅ-ಪ್ರೀತಿಗೆ ಜಾಗವೇ ಇರುವುದಿಲ್ಲ. ■


## ನಮ್ಮ ಪ್ರಕಟಣೆಗಳು

| | | |
|---|---|---|
| Doorways to Light | | 200/- |
| New Age Realities | | 200/- |
| Higher Communication & Other Realities | | 100/- |
| Light Body & Other Realities | | 100/- |
| Master-Pupil Talks | | 60/- |
| Master-Pupil Talks - Vol 2 | | 75/- |
| iGuruji Vol 1,3,4 & 7 | | each 150/- |
| iGuruji - Vol 2 | 120/- | |
| iGuruji - Vol 5 | | 100/- |
| iGuruji - Vol 6 | 75/- | |
| Living in the Light of My Guru | | 220/- |
| How to Meditate | | 50/- |
| Dhyana Yoga | | 50/- |
| Descent of Soul | | 50/- |
| Practising Shambala Principles | | 50/- |
| Astral Ventures of A Modern Rishi | | 50/- |
| Channelled Knowledge from the Rishis-Vol 2 | | 150/- |
| Channelled Knowledge from the Rishis-Vol 3 & 4 | | each 200/- |
| Guruji Speaks Part - I & II | | each 200/- |
| Guruji Speaks (Vol 3) | | 150/- |
| Guruji Speaks (Vol 4) | | 250/- |
| Guruji Speaks (Vol 5 & 7) | | each 200/- |
| The Book of Reflections - Vol 1 & 2 | | each 200/- |
| The Book of Reflections - Vol 3 | | 150/- |
| Meditators on Meditations | | 75/- |
| Meditators on Experiences | | 75/- |
| Meditational Experiences - Vol 1 & 2 | | each 150/- |
| Awareness | | 60/- |
| Living in Light | | 10/- |
| Light | | 10/- |
| Quotes from the Rishis - Vol 1 & 2 | | each 100/- |
| Pyramid Revelations | | 100/- |
| Thus Spoke Guruji Krishnananda - Vol 1 & 4 | | each 200/- |
| Thus Spoke Guruji Krishnananda - Vol 2 & 3 | | each 250/- |
| ಬೆಳಕಿಗೆ ಬಾಗಿಲುಗಳು | | 150/- |
| ಋಷಿಗಳಿಂದ ಬಂದ ಜ್ಞಾನ | | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | | 150/- |
| ಗುರು–ಶಿಷ್ಯರ ಸಂಭಾಷಣೆ | | 60/- |
| ಐ–ಗುರೂಜಿ ಭಾಗ 1 | | 150/- |
| ಐ–ಗುರೂಜಿ ಭಾಗ 2 | | 120/- |
| ಹೊಸ ಯುಗದ ವಾಸ್ತವಗಳು | | 120/- |
| ಉನ್ನತ ಸಂಪರ್ಕಗಳು | | 100/- |
| ಅನಿಸಿಕೆಗಳು | | 120/- |
| ಧ್ಯಾನ ಮಾಡುವುದು ಹೇಗೆ | | 50/- |
| ಧ್ಯಾನ ಯೋಗ | | 50/- |
| ಆತ್ಮದ ಅವರೋಹಣ | | 50/- |
| ಶಂಬಲ ನಿಯಮಗಳ ಅಭ್ಯಾಸ | | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | | 50/- |
| ಗುರೂಜಿ ನಾ ಕಂಡಂತೆ | | 30/- |
| ಬೆಳಕಿನಲ್ಲಿ ಬದುಕುವುದು | | 10/- |
| ಬೆಳಕು | | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | | 100/- |
| प्रकाशवाट (Marathi) | | 150/- |
| आयगुरूजी (Marathi) | | 100/- |
| ध्यान कसे करावे (Marathi) | | 50/- |
| ध्यानयोग (Marathi) | | 50/- |
| आत्म्याचे पृथ्वीवर अवतरण (Marathi) | | 50/- |
| शंबला तत्त्वांचा अभ्यास (Marathi) | | 50/- |
| एका आधुनिक ऋषीचे सूक्ष्मजगातील पराक्रम (Marathi) | | 50/- |
| प्रकाशमय जीवन (Marathi) | | 10/- |
| प्रकाश (Marathi) | | 10/- |
| उच्चस्तरीय संवाद आणि इतर सत्ये (Marathi) | | 100/- |
| गुरु–शिष्य संवाद (Marathi) | | 60/- |
| ध्यान कैसे करे (Hindi) | | 50/- |
| ध्यान-योग (Hindi) | | 50/- |
| प्रकाश (Hindi) | | 10/- |
| प्रकाशमय जीवन (Hindi) | | 10/- |
| प्रकाश की ओर (Hindi) | | 150/- |
| आत्मा का अवतरण (Hindi) | | 50/- |
| தியானம் செய்வது எப்படி | | 50/- |
| ஒளியின் வாயில்கள் | | 200/- |
| தியான யோகம் | | 50/- |
| ஆத்மாவின் அவரோகணம் | | 50/- |
| நவீன ரிஷி ஒருவரின் சூஷ்ம சாகசங்கள் | | 50/- |
| சம்பலா நியமங்களின் அப்பியாசங்கள் | | 50/- |
| ధ్యానం చేయ్యడం ఎలా | | 50/- |
| కాంతికి ద్వారములు | | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಈ ಮೂರು ತಿಂಗಳುಗಳಲ್ಲಿ ನನ್ನ ಜೀವನವೇ ಬದಲಾಗಿದೆಯೆಂದೆನಿಸುತ್ತಿದೆ. ಅದು ಹೇಗೋ ನನ್ನ ಗಮನ ಸಾಧನೆಯ ಕಡೆಗೆ ತಿರುಗಿದೆ. ಪ್ರಶಾಂತವಾಗಿರಲು, ಬೆಳಕನ್ನು ಹೊಂದಿರಲು, ಧ್ಯಾನ ಅಥವ ಕೊನೆಯ ಪಕ್ಷ ಬೆಳಕನ್ನು ಚಾನಲ್ ಮಾಡಲು ಪ್ರತಿ ನಿತ್ಯ ನಾನು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿದ್ದೇನೆ. ನಾನು ಶಂಬಲದ ಮೊದಲ ನಿಯಮವನ್ನು ಅಭ್ಯಾಸ ಮಾಡುವಾಗ ಉಂಟಾಗುವ ಸಂತೋಷ ಅದ್ವಿತೀಯ! ಈಗ ನಾನು ಅದನ್ನು ಅನುಭವಿಸುವುದರ ಮೇಲೆ ಮತ್ತು ದಿನ ಪೂರ್ತಿ ಅದನ್ನು ಅಭಿವ್ಯಕ್ತಿಸುವುದರ ಮೇಲೆ ಹೆಚ್ಚಿನ ಗಮನ ಹರಿಸಬೇಕಾಗಿದೆ ಅಷ್ಟೆ!

–ಶ್ರೀಯಾ ಶಶಾಂಕ್

ಈಗ ನಾನು ಮೊದಲಿನಂತೆ ಕಷ್ಟಕರವಾದ ಹಾಗು ಸವಾಲಿನ ಸಂದರ್ಭಗಳಲ್ಲಿ ಅಸಮಾಧಾನ ಗೊಳ್ಳುವುದಿಲ್ಲ. ನಾನೀಗ ಸಮಾಧಾನದಿಂದ ಇರುತ್ತೇನೆ.

–ಬಿ. ಪದ್ಮಾವತಿ.

ನಾನು ರಜಕ್ಕಾಗಿ ಫ್ಲಾರಿಡಾಗೆ ಹೋಗುವ ಹಿಂದಿನ ರಾತ್ರಿ, ಬೆಳಕನ್ನು ಚಾನಲ್ ಮಾಡುತ್ತಿದ್ದಾಗ ನನ್ನ ಅಭ್ಯಾಸದ ವರದಿ ಕಳುಹಿಸುವುದು ಬಾಕಿ ಇದೆ ಎಂದು ನೆನಪಾಯಿತು. ಹಾಗೆಯೇ ಮತ್ತೊಬ್ಬರು ಸಹ ನನಗೆ ಸರಿಯಾದ ಸಮಯದಲ್ಲಿ ವರದಿ ಕಳುಹಿಸುವುದನ್ನು ನೆನಪಿಸಿದರು.

–ವಿನಮ್ರ ಲಾಂಗೋನಿ

ಹಿಂದಿನ ತಿಂಗಳು ನನ್ನ ಕಛೇರಿಯಲ್ಲಿ ಕಕ್ಷಿಗಾರರೊಬ್ಬರು ಅನಾವಶ್ಯಕವಾಗಿ ನನ್ನನ್ನು ವಿವಾದಕ್ಕೆ ಎಳೆದು, ನನ್ನ ತಪ್ಪಿಲ್ಲದಿದ್ದರೂ, ನನ್ನ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳುವುದಾಗಿ ಹೆದರಿಸಿದರು. ನಾನು ಬೆಳಕನ್ನು ಸಹಾಯಕ್ಕಾಗಿ ಪ್ರಾರ್ಥಿಸಿದೆ. ಹೇಗೋ ಆ ವಿಷಯವು ಇಬ್ಬರಿಗೂ ಹೆಚ್ಚಿನ ಹಾನಿಯಾಗದಂತೆ ಬಗೆಹರಿಯಿತು. ಬೆಳಕು ತನ್ನದೇ ಆದ ರೀತಿಯಲ್ಲಿ ಕೆಲಸ ಮಾಡುತ್ತದೆ!

–ಒಬ್ಬ ಸಾಧಕ

ಬೆಂಗಳೂರಿನಲ್ಲೂ ಕೊರೋನಾ ವೈರಸ್ ಇರುವುದರ ಸಾಧ್ಯತೆಯ ಬಗ್ಗೆ ಕೇಳಿದಾಗ ನಾನು ಗುರೂಜಿ ಹಾಗೂ ಋಷಿಗಳನ್ನು ಇಡೀ ಮಾನವ ಕುಲಕ್ಕೆ ಪರಿಹಾರ ಕೊಡುವಂತೆ ಪ್ರಾರ್ಥಿಸಿದೆ. ಕೆಲವು ಕ್ಷಣಗಳ ನಂತರ, ನಾವು ಬೆಳಕನ್ನು ಚಾನಲ್ ಮಾಡುತ್ತಾ ಹೋದಂತೆ ಪ್ರತಿಯೊಬ್ಬರಿಗೂ ಪರಿಹಾರ ದೊರೆಯುತ್ತದೆ ಮತ್ತು ಎಲ್ಲರನ್ನೂ ರಕ್ಷಿಸಲಾಗುತ್ತದೆ, ಎಂಬ ಧ್ವನಿ ಕೇಳಿಸಿತು. ಆ ಭರವಸೆಯಿಂದ ನಾವೆಲ್ಲರೂ ಅನುಗ್ರಹಿತರು ಎಂದೆನಿಸಿ ನಿರಾಳವಾಯಿತು.

–ಸುದೀಪ್ ಜೈರಾಮ

ಪ್ರತಿ ದಿನ ಎದ್ದ ತಕ್ಷಣ ಅಂದಿನ ತಾಜಾತನಕ್ಕಾಗಿ ಎದುರುನೋಡುತ್ತೇನೆ. ದೊಡ್ಡ ದೊಡ್ಡ ವಿಷಯಗಳಿಗಾಗಿ ನೋಡುವುದರ ಬದಲು ಸಣ್ಣ ವಿಷಯಗಳಲ್ಲೇ ನನಗೆ ಸಂತೋಷವಾಗುತ್ತದೆ. ನಾನು, ಒಂದು ದೊಡ್ಡ ಪ್ರಕಾಶಮಾನವಾದ ಬೆಳಕನ್ನು ಅಟ್ಟಿಸಿಕೊಂಡು ಗುಹೆಯ ಒಳಗೆ ಅಂಬೆಕಾಲನ್ನು ಇಡುತ್ತಾ ಆ ಕ್ಷಣದಲ್ಲೇ ಬದುಕುತ್ತಿರುವ ಒಂದು ಪುಟ್ಟ ಮಗುವಿನಂತೆ, ಎಂದು ನನಗೆ ಅನಿಸುತ್ತದೆ.

–ಸುಲೊಚನಾ ರಾಮಸ್ವಾಮಿ

ಧ್ಯಾನ ಮಾಡುವಾಗ ನನ್ನ ಇಡೀದೇಹ ಅದರಲ್ಲೂ ನನ್ನ ತಲೆ ಹಾಗೂ ಎರಡು ಕೈಗಳಲ್ಲಿ ಕಂಪನ ವುಂಟಾಗುತ್ತದೆ. ಅದೇ ಸಮಯದಲ್ಲಿಯೇ ನಾನು ಪ್ರಶಾಂತವಾಗಿ ಶಾಂತಿಯಿಂದ ಸಂತೋಷವನ್ನು ಅನುಭವಿಸುತ್ತೇನೆ.

–ಕುಮಾರ ತುಮಕೂರು ನಾಗೇಂದ್ರ

ದೀಪಾವಳಿಯ ಮರುದಿನ ನನ್ನ ತಂದೆಯವರನ್ನು ಅನಾರೋಗ್ಯದ ಕಾರಣ ನಡುರಾತ್ರಿಯಲ್ಲಿ ಆಸ್ಪತ್ರೆಗೆ ಸೇರಿಸಬೇಕಾಯಿತು. ನಾನು ಸಮಾಧಾನದಿಂದಲೇ ಇದ್ದು ಅವರಿಗೆ ಬೆಳಕನ್ನು ಕಳುಹಿಸುತ್ತಿದ್ದೆ. ಒಂದು ಗಂಟೆಯ ನಂತರ ಅವರ ಆರೋಗ್ಯ ಸ್ಥಿರಗೊಂಡು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದರು. ಇದು ಖಂಡಿತವಾಗಿಯೂ ಮಾಸ್ಟರ್‌ಗಳು ಕೊಟ್ಟ ಅನುಗ್ರಹವೆಂಬುದು ನನಗೆ ತಿಳಿಯಿತು. ನನ್ನ ಮಗಳಿಗೆ ಕೆಲಸದಲ್ಲಿ ಕೆಲವು ತೊಂದರೆಗಳಾಗುತ್ತಿದ್ದವು. ಲೈಟ್ ಚಾನಲಿಂಗ್ ಅವಳಿಗೆ ತುಂಬಾ ಸಹಾಯ ಮಾಡಿತು. ನಾನು ಮಾಸ್ಟರ್‌ಗಳ ಸಹಾಯ ಹಾಗೂ ಮಾರ್ಗದರ್ಶನಕ್ಕೆ ಅತ್ಯಂತ ಕೃತಜ್ಞಳಾಗಿದ್ದೇನೆ. ನನ್ನನ್ನು ರಕ್ಷಿಸುತ್ತಿರುವ ಅವರಿಗೆ ನಾನು ಪ್ರೀತಿ ಹಾಗೂ ಆದರದಿಂದ ವಂದಿಸುತ್ತೇನೆ.

–ಮಧುರ ತ್ಯಾಗಿ

ಪ್ರಪಂಚದ ಎಲ್ಲರೂ ಅನುಭವಿಸುತ್ತಿರುವ ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ನಾನು ಇಡೀ ಪ್ರಪಂಚಕ್ಕೆ ಲೈಟ್ ಚಾನಲ್ ಮಾಡುತ್ತಿದ್ದೇನೆ. ಇದಾದ ನಂತರ ನಾನು ಅನುಭವಿಸುವ ಪ್ರೀತಿ ಹಾಗೂ ಶಾಂತಿಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ.

–ಪ್ರಿಯಂವದಾ ಗೋಡ್ಸೆ

ಪ್ರತಿ ದಿನವೂ ನನಗೆ ಏನಾದರೊಂದು ಹೊಸದನ್ನು ತರುತ್ತಿದೆ. ನಾನು ಅವುಗಳನ್ನೆಲ್ಲ ಮೊದಲಿಗಿಂತಲೂ ಸುಲಭವಾಗಿ ನಿರ್ವಹಿಸುತ್ತಿದ್ದೇನೆ. ಒಂದು ಬಗೆಯ ರಕ್ಷಾಕವಚ ಯಾವಾಗಲೂ ನನ್ನೊಂದಿಗೆ ಇರುವಂತೆನಿಸುತ್ತದೆ. ಕೆಲವು ವೇಳೆ ಸ್ತಬ್ಧವಾಗಿರುತ್ತಿದ್ದ ನನ್ನ ಯೋಚನೆಗಳು ಸಹ ಈಗ ಮೊದಲಿಗಿಂತ ಎಚ್ಚರಿಕೆಯಿಂದ ಕೂಡಿವೆ. ಇದು ಗುರೂಜಿಯವರ ಮತ್ತು ಋಷಿಗಳ ದಯೆಯಿಂದಲೇ ಆಗಿದೆ ಎಂಬುದು ಖಚಿತ.

–ನಂದಿತ ಪಾಟೀಲ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ